Draft (62)

# ಸಮಾಜ ಕಲ್ಯಾಣ ಇಲಾಖೆ

## ದಿನಾಂಕ:28.09.2018 ರಂದು ಸನ್ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ-2013 ರ ಪ್ರಕಾರ ರಾಜ್ಯ ಅನುಸೂಚಿತ ಜಾತಿಗಳ/ಅನುಸೂಚಿತ ಪಂಗಡಗಳ ಅಭಿವೃದ್ಧಿ ಪರಿಷತ್ ಸಭೆಯ ನಡವಳಿಗಳು

**ಸ್ಥಳ:** ಕೊಠಡಿ ಸಂಖ್ಯೆ:334,
3ನೇ ಮಹಡಿ,
ಸಮ್ಮೇಳನ ಸಭಾಂಗಣ,
ವಿಧಾನಸೌಧ, ಬೆಂಗಳೂರು

**ಸಭೆಗೆ ಹಾಜರಾದ ಸದಸ್ಯರುಗಳ ಮತ್ತು ಅಧಿಕಾರಿಗಳ ವಿವರ:-**

| | | |
|---|---|---|
| 1 | **ಶ್ರೀ ಹೆಚ್.ಡಿ.ಕುಮಾರಸ್ವಾಮಿ,**<br>ಸನ್ಮಾನ್ಯ ಮುಖ್ಯಮಂತ್ರಿಗಳು. | ಅಧ್ಯಕ್ಷರು |
| 2 | **ಶ್ರೀ ಪ್ರಿಯಾಂಕ್ ಖರ್ಗೆ,**<br>ಮಾನ್ಯ ಸಮಾಜ ಕಲ್ಯಾಣ ಸಚಿವರು. | ಉಪಾಧ್ಯಕ್ಷರು |
| 3 | **ಡಾ.ಜಿ.ಪರಮೇಶ್ವರ್,**<br>ಮಾನ್ಯ ಉಪ ಮುಖ್ಯ ಮಂತ್ರಿಗಳು | ವಿಶೇಷ ಆಹ್ವಾನಿತರು |
| 4 | **ಶ್ರೀ. ಹೆಚ್.ಡಿ. ರೇವಣ್ಣ,**<br>ಮಾನ್ಯ ಲೋಕೋಪಯೋಗಿ ಸಚಿವರು | ವಿಶೇಷ ಆಹ್ವಾನಿತರು |
| 5 | **ಶ್ರೀ ಜಿ.ಟಿ.ದೇವೇಗೌಡ,**<br>ಮಾನ್ಯ ಉನ್ನತ ಶಿಕ್ಷಣ ಸಚಿವರು. | ಪದನಿಮಿತ್ತ ಸದಸ್ಯರು |
| 6 | **ಶ್ರೀ. ಆರ್. ಧ್ರುವನಾರಾಯಣ,**<br>ಮಾನ್ಯ ಲೋಕಸಭಾ ಸದಸ್ಯರು. | ಸದಸ್ಯರು |
| 7 | **ಶ್ರೀ ಹೆಚ್.ಕೆ. ಕುಮಾರಸ್ವಾಮಿ,**<br>ಮಾನ್ಯ ವಿಧಾನಸಭಾ ಸದಸ್ಯರು. | ಸದಸ್ಯರು |
| 8 | **ಡಾ॥ ಜಿ. ಉಮೇಶ್ ಜಾದವ್,**<br>ಮಾನ್ಯ ವಿಧಾನಸಭಾ ಸದಸ್ಯರು. | ಸದಸ್ಯರು |
| 9 | **ಶ್ರೀ ಡಾ॥ ಕೆ.ಅನ್ನದಾನಿ,**<br>ಮಾನ್ಯ ವಿಧಾನಸಭಾ ಸದಸ್ಯರು. | ಸದಸ್ಯರು |
| 10 | **ಶ್ರೀ. ಧರ್ಮಸೇನ.ಆರ್**<br>ಮಾನ್ಯ ವಿಧಾನ ಪರಿಷತ್ತು ಸದಸ್ಯರು. | ಸದಸ್ಯರು |
| 11 | **ಶ್ರೀ. ಟಿ.ಎಂ. ವಿಜಯ ಭಾಸ್ಕರ, ಭಾ.ಆ.ಸೇ**<br>ಸರ್ಕಾರದ ಮುಖ್ಯ ಕಾರ್ಯದರ್ಶಿ | ಪದನಿಮಿತ್ತ ಸದಸ್ಯರು |
| 12 | **ಶ್ರೀಮತಿ. ವಂದಿತಾ ಶರ್ಮ, ಭಾ.ಆ.ಸೇ**<br>ಅಭಿವೃದ್ಧಿ ಆಯುಕ್ತರು, ಹಾಗೂ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ. | ಪದನಿಮಿತ್ತ ಸದಸ್ಯರು |
| 13 | **ಶ್ರೀ. ಐ.ಎಸ್.ಎನ್. ಪ್ರಸಾದ್, ಭಾ.ಆ.ಸೇ**<br>ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ. | ಪದನಿಮಿತ್ತ ಸದಸ್ಯರು |

| | | |
|---|---|---|
| 14 | **ಶ್ರೀಮತಿ. ಉಮಾ ಮಹಾದೇವನ್, ಭಾ.ಆ.ಸೇ**<br>ಸರ್ಕಾರದ ಪ್ರಧಾನ ಕಾರ್ಯದರ್ಶಿ,<br>ಯೋಜನೆ, ಕಾರ್ಯಕ್ರಮಗಳ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ. | ಪದನಿಮಿತ್ತ ಸದಸ್ಯರು |
| 15 | **ಶ್ರೀ. ಎಂ. ಲಕ್ಷ್ಮೀನಾರಾಯಣ, ಭಾ.ಆ.ಸೇ**<br>ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ. | ಪದನಿಮಿತ್ತ ಸದಸ್ಯ ಕಾರ್ಯದರ್ಶಿ |
| 16 | **ಡಾ: ಇ. ವೆಂಕಟಯ್ಯ, ಭಾ.ಆ.ಸೇ (ನಿ)** | ನೋಡಲ್ ಏಜೆನ್ಸಿ ಸಲಹೆಗಾರರು. |
| 17 | ಉಪ ಯೋಜನೆಗಳನ್ನು ಅನುಷ್ಟಾನ ಮಾಡುತ್ತಿರುವ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು ಹಾಗೂ ಇಲಾಖಾ ಮುಖ್ಯಸ್ಥರು | |

ಪ್ರಾರಂಭದಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಇವರು ರಾಜ್ಯ ಪರಿಷತ್ ಅಧ್ಯಕ್ಷರಾದ ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಉಪ ಮುಖ್ಯಮಂತ್ರಿಗಳು, ರಾಜ್ಯ ಪರಿಷತ್ತಿನ ಎಲ್ಲಾ ನಾಮನಿರ್ದೇಶಿತ ಮಾನ್ಯ ಸದಸ್ಯರುಗಳು, ವಿಶೇಷ ಆಹ್ವಾನಿತರಾದ ಮಾನ್ಯ ಲೋಕೋಪಯೋಗಿ ಸಚಿವರು ಹಾಗೂ ಸರ್ಕಾರದ ಎಲ್ಲಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು ಮತ್ತು ಸಭೆಗೆ ಹಾಜರಾದ ಎಲ್ಲಾ ಇಲಾಖಾ ಮುಖ್ಯಸ್ಥರು ಹಾಗೂ ಅಧಿಕಾರಿಗಳನ್ನು ಸ್ವಾಗತಿಸಿದರು.

ಅಪರ ಮುಖ್ಯ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಇವರು ಪರಿಶಿಷ್ಟ ಜಾತಿ/ಪಂಗಡದವರ ಅಭಿವೃದ್ಧಿಗಾಗಿ 2018-19 ನೇ ಸಾಲಿನ ಆಯವ್ಯಯದಲ್ಲಿ ಹೆಚ್ಚಿನ ಅನುದಾನ ಒದಗಿಸಿರುವ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಧನ್ಯವಾದ ಸಲ್ಲಿಸಿ ಸಭೆಯನ್ನು ನಡೆಸಿಕೊಡುವಂತೆ ಕೋರಿದರು.

ನಂತರ ಮಾನ್ಯ ಉಪ ಮಂತ್ರಿಗಳು ಸಭೆಯನ್ನು ಉದ್ದೇಶಿಸಿ ಮಾತನಾಡಿ 2013-14ನೇ ಸಾಲಿನಲ್ಲಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯೋಜನೆಗೆ ಸುಮಾರು ರೂ. 8616.00 ಕೋಟಿ ಅನುದಾನ ಒದಗಿಸಿದ್ದು, ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅಧಿನಿಯಮ ಜಾರಿಗೆ ಬಂದ ನಂತರ ಪ್ರತಿ ವರ್ಷ ಆಯವ್ಯಯದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನಸಂಖ್ಯೆಗೆ ಅನುಗುಣವಾಗಿ ಶೇ.24.1 ರಷ್ಟು ಅನುದಾನ ಒದಗಿಸಲಾಗಿ ಪ್ರಸ್ತುತ 2018-19 ನೇ ಸಾಲಿನಲ್ಲಿ ಈ ಮೊತ್ತ ರೂ. 29209.48 ಕೋಟಿಗಳಿಗೆ ಏರಿಕೆಯಾಗಿರುತ್ತದೆ.

ಮುಂದುವರೆದು, ಹತ್ತು ವರ್ಷಗಳ ಹಿಂದೆ ಈ ಉಪಯೋಜನೆಗಳಡಿ ಶೇ.50 ರಿಂದ 60 ರಷ್ಟು ಅನುದಾನವನ್ನು ಉಪಯೋಗಿಸಲಾಗುತ್ತಿದ್ದು, ಕಾಯ್ದೆ ಜಾರಿಗೆ ಬಂದ ನಂತರ ಸುಮಾರು ಶೇ. 95 ರಷ್ಟು ಅದೇ ಆರ್ಥಿಕ ವರ್ಷದಲ್ಲಿ ವೆಚ್ಚ ಮಾಡಲಾಗುತ್ತದೆ. ಅದರಿಂದ ಈ ಯೋಜನೆಯಡಿ ಒದಗಿಸಿದ ಅನುದಾನವನ್ನು ಹೆಚ್ಚಿನ ಮಟ್ಟಿಗೆ ಪರಿಶಿಷ್ಟ ಜಾತಿ/ಪಂಗಡದವರ ಆರ್ಥಿಕ ಅಭಿವೃದ್ಧಿಗಾಗಿ ಬಳಸಿಕೊಳ್ಳುವುದು ಸೂಕ್ತವೆಂದು ಹೇಳಿದರು.

ಪ್ರಸಕ್ತ ಸಾಲಿನ ಕ್ರಿಯಾ ಯೋಜನೆಯನ್ನು ಪರಿಶೀಲಿಸಲಾಗಿ ಕೆಲವೊಂದು ಇಲಾಖೆಗಳಲ್ಲಿ ಈ ಯೋಜನೆಗಳಡಿ ಒದಗಿಸಿದ ಅನುದಾನವನ್ನು ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರಿಗೆ ವೇತನ ಪಾವತಿ, ಆಸ್ಪತ್ರೆ/ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಟ್ಟಡ ನಿರ್ಮಾಣ ಮತ್ತು ನಿರ್ವಹಣೆ ಇತ್ಯಾದಿ ಕಾಮಗಾರಿಗಳಿಗೆ ಬಳಸಿಕೊಳ್ಳುವುದು ಸಮಂಜಸವಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. ಸದರಿ ಉಪಯೋಜನೆಯಡಿ ಹಂಚಿಕೆ ಮಾಡಿದ ಅನುದಾನವನ್ನು ಕಟ್ಟಡ ಮತ್ತು ಇತರೆ ಮೂಲಭೂತ

ಸೌಕರ್ಯಗಳಿಗಾಗಿ ಡೀಮ್ಡ್ ವೆಚ್ಚವೆಂದು ಭಾವಿಸಿ ವೆಚ್ಚ ಭರಿಸುವುದು ಸಮಂಜಸವಲ್ಲವೆಂದು ತಿಳಿಸಿದರು.

ನಂತರ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಇವರು 2017-18 ನೇ ಸಾಲಿನಲ್ಲಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಉಪ ಯೋಜನೆಗಳಡಿ ಒಟ್ಟಾರೆ ಶೇ. 95 ರಷ್ಟು ಪ್ರಗತಿ ಸಾಧಿಸಲಾಗಿದೆ ಎಂದು ಹಾಗೂ 2018-19 ನೇ ಸಾಲಿನ ಕ್ರಿಯಾ ಯೋಜನೆಗಳ ಬಗ್ಗೆ ವಿವರಿಸಿದರು.

## 2017-18 ನೇ ಸಾಲಿನ ಪ್ರಗತಿ

(ರೂ. ಕೋಟಿಗಳಲ್ಲಿ)

| ಉಪ ಯೋಜನೆ | ಹಂಚಿಕೆ | ಬಿಡುಗಡೆ | ವೆಚ್ಚ | ಹಂಚಿಕೆಗೆ % | ಬಿಡುಗಡೆಗೆ % | ಉಳಿಕೆ ಅನುದಾನ |
|---|---|---|---|---|---|---|
| SCSP | 19650.58 | 19295.66 | 18394.13 | 94 | 95 | 901.53 |
| TSP | 8190.40 | 8027.66 | 7730.20 | 94 | 96 | 297.46 |
| **ಒಟ್ಟು** | **27840.98** | **27323.32** | **26124.33** | **94** | **96** | **1198.99** |

ಕೆಲವು ಕಾರಣಗಳಿಂದ ವೆಚ್ಚವಾಗದೇ ಉಳಿದ ಅನುದಾನವನ್ನು ಮುಂದಿನ ವರ್ಷಗಳಲ್ಲಿ ಹಂಚಿಕೆ ಮಾಡಲಾಗುವುದೆಂದು ಸಭೆಯ ಗಮನಕ್ಕೆ ತಂದರು. ಈ ಕೆಳಕಂಡ 4 ಇಲಾಖೆಗಳು ಶೇ.90 ಕ್ಕಿಂತ ಕಡಿಮೆ ಪ್ರಗತಿ ಸಾಧಿಸಿರುತ್ತಾರೆ.

| ಕ್ರ. ಸಂ | ಇಲಾಖೆಗಳು | ಶೇಕಡವಾರು ಖರ್ಚು |
|---|---|---|
| 1 | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ | 29% |
| 2 | ಕೌಶಾಲ್ಯಾಭಿವೃದ್ಧಿ ಇಲಾಖೆ | 55% |
| 3 | ಉನ್ನತ ಶಿಕ್ಷಣ | 74% |
| 4 | ಸಣ್ಣ ಕೈಗಾರಿಕೆ | 89% |

**ಭೌತಿಕ ಸಾಧನೆ:**

ಹಿಂದಿನ ವರ್ಷದಲ್ಲಿ ಎಲ್ಲಾ ಇಲಾಖೆಗಳಲ್ಲಿ ವಿದ್ಯಾರ್ಥಿಗಳಿಗೆ ನೀಡುತ್ತಿರುವ ವಿವಿಧ ಸೌಲಭ್ಯಗಳನ್ನು ಸೇರಿ ಒಟ್ಟಾರೆ 1.34 ಕೋಟಿ ಫಲಾನುಭವಿಗಳಿಗೆ ವಿವಿಧ ಸೌಲಭ್ಯಗಳನ್ನು ಒದಗಿಸಲಾಗಿದೆ.

ತದನಂತರ 2018-19 ನೇ ಸಾಲಿನಲ್ಲಿ 39 ಅಭಿವೃದ್ಧಿ ಇಲಾಖೆಗಳಿಗೆ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ರಡಿ ಒಟ್ಟು ರೂ.29209.47 ಕೋಟಿ ಅನುದಾನ ಒದಗಿಸಿದ್ದು, ಸದರಿ ಅನುದಾನಕ್ಕೆ ವಿವಿಧ ಅಭಿವೃದ್ಧಿ ಇಲಾಖೆಗಳು ಸಲ್ಲಿಸಿದ ಕರಡು ಕ್ರಿಯಾ ಯೋಜನೆಗಳನ್ನು ಮಾನ್ಯ ಸಮಾಜ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿ ನೋಡಲ್ ಏಜೆನ್ಸಿ ಸಭೆಗಳಲ್ಲಿ ಚರ್ಚಿಸಿ ರಾಜ್ಯ ಪರಿಷತ್ತಿಗೆ ಅನುಮೋದನೆಗಾಗಿ ಸಲ್ಲಿಸಲಾಗುತ್ತಿದೆ.

ಕಾರ್ಯಕ್ರಮಗಳ ಬಗ್ಗೆ ಮತ್ತು ತೆಗೆದುಕೊಳ್ಳಬೇಕಾದ ತೀರ್ಮಾನಗಳ ಬಗ್ಗೆ ವಿವರಿಸಿದರು.

**ಕೃಷಿ ಇಲಾಖೆ :-**

2018-19 ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ- ಎಸ್.ಸಿ.ಎಸ್.ಪಿ-ರೂ.763.85 ಕೋಟಿ, ಟಿ.ಎಸ್.ಪಿ- ರೂ.301.82 ಕೋಟಿ ಒಟ್ಟು ರೂ.1065.67 ಕೋಟಿ.

ಈ ಕೆಳಕಂಡ ಕಾರ್ಯಕ್ರಮಗಳು ಮುಂದುವರೆದ ಕಾರ್ಯಕ್ರಮಗಳು ಎಂದು ತಿಳಿಸಿದರು.

1) ಪರಿಶಿಷ್ಟ ಜಾತಿ/ ಪಂಗಡದ ಫಲಾನುಭವಿಗಳಿಗೆ ಶೇ. 75 ರಷ್ಟು ರಿಯಾಯಿತಿಯಲ್ಲಿ ಬಿತ್ತನೆ ಬೀಜಗಳನ್ನು ನೀಡಲಾಗುತ್ತಿದೆ.
2) ಶೇ. 90 ರಷ್ಟು ಸಹಾಯಧನ ನೀಡಿ ಕೃಷಿ ಯಂತ್ರೋಪಕರಣ/ಉಪಕರಣಗಳನ್ನು ಮತ್ತು ಹನಿ ನೀರಾವರಿ/ತುಂತುರು ನೀರಾವರಿ ಸೌಲಭ್ಯಗಳನ್ನು ನೀಡಲಾಗುತ್ತಿದೆ.
3) 25 ಹೆಚ್.ಪಿ ಸಾಮರ್ಥ್ಯದ ಟ್ರಾಕ್ಟರ್‌ಗಳನ್ನು ಖರೀದಿಸಲು ರೂ.2.00 ಲಕ್ಷಗಳ ಸಹಾಯಧನ ನೀಡಲಾಗುತ್ತದೆ.
4) ಕೃಷಿ ಭಾಗ್ಯ ಯೋಜನೆಯಡಿಯಲ್ಲಿ ಕೃಷಿ ಹೊಂಡ ಮತ್ತು ಡಿಸೇಲ್ ಪಂಪ್ ಸೆಟ್ ನೀಡಲಾಗುತ್ತಿದೆ.
5) ಪ.ಜಾತಿ/ಪಂಗಡದ ರೈತರಿಗೆ ತರಬೇತಿ ಮತ್ತು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.
6) ಜಲಾನಯನ ಅಭಿವೃದ್ಧಿ ಇಲಾಖೆಯಿಂದ ಪ್ರಾಜೆಕ್ಟ್ ಪ್ರದೇಶದಲ್ಲಿ ಪ.ಜಾತಿ/ಪ.ಪಂಗಡ ಜನರ ಜಮೀನಿನ ಅಭಿವೃದ್ಧಿ ಪಡಿಸುವುದು.
7) ಗ್ರಾಮೀಣ ಕೃಷಿ ಯಂತ್ರೋಪಕರಣ / ಸೇವಾ ಕೇಂದ್ರಗಳನ್ನು ಸ್ಥಾಪಿಸಲು ಎಸ್.ಸಿ/ಎಸ್.ಟಿ ಜನರಿಗೆ ಗರಿಷ್ಠ 75ರಷ್ಟು ಸಹಾಯಧನ ನೀಡುವುದು. (ಸಹಾಯಧನ ಗರಿಷ್ಠ ರೂ.5.00 ಲಕ್ಷ)
8) ಬೆಳೆ ವಿಮೆ ಸೌಲಭ್ಯ ಕಲ್ಪಿಸಲಾಗುತ್ತಿದೆ.

2018-19ನೇ ಸಾಲಿನಲ್ಲಿ ಹೊಸದಾಗಿ ಡಿ.ಬಿ.ಟಿ ಮೂಲಕ ರೈತರಿಗೆ ಆರ್ಥಿಕ ಬೆಂಬಲ ನೀಡುವುದು, ಅರಣ್ಯ ಹಕ್ಕು ಅಧಿನಿಯಮದಡಿ ಭೂಮಿ ಪಡೆದ ಪ.ಪಂಗಡದ ರೈತರಿಗೆ ಕೃಷಿ ಉಪಕರಣಗಳನ್ನು ಮತ್ತು ಇತರ ಸೌಲಭ್ಯಗಳನ್ನು ಆದ್ಯತೆ ಮೇರೆಗೆ ನೀಡುವುದು ಹಾಗೂ ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆಬಾವಿಗಳನ್ನು ಒದಗಿಸಿದ ಫಲಾನುಭವಿಗಳಿಗೆ ಸಮಗ್ರ ಅಭಿವೃದ್ಧಿಗಾಗಿ ಕೃಷಿ ಹೊಂಡ, ತುಂತುರು, ಹನಿ ನೀರಾವರಿ ಸೌಲಭ್ಯಗಳನ್ನು ಒದಗಿಸಲು ಪ್ರಸ್ತಾಪಿಸಲಾಗಿದೆ ಎಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ. ಆರ್. ಧ್ರುವನಾರಾಯಣ ಇವರು ಮಾತನಾಡಿ ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಲ್ಯಾಪ್ ಟಾಪ್ ನೀಡಲು ಹಾಗೂ ಸ್ಟಡಿ ಟೂರ್‌ಗಳಿಗೆ ವೆಚ್ಚ ಭರಿಸಲು ಕ್ರಿಯಾ ಯೋಜನೆಯಲ್ಲಿ ಸೇರಿಸಲು ಸಲಹೆ ನೀಡಿದರು.

ಪ್ರಸ್ತುತ 25 ಹೆಚ್.ಪಿ. ಟ್ರಾಕ್ಟರ್‌ಗಳನ್ನು ಮಾತ್ರ ರೂ. 2.00 ಲಕ್ಷ ಸಹಾಯಧನದಲ್ಲಿ ಎಸ್.ಸಿ/ಎಸ್.ಟಿ ರೈತರಿಗೆ ನೀಡಲಾಗುತ್ತಿದ್ದು, ಇದನ್ನು ಎಲ್ಲಾ ಸಾಮರ್ಥ್ಯದ ಟ್ರಾಕ್ಟರ್‌ಗಳಿಗೆ ರೂ. 3.00 ಲಕ್ಷ ಸಹಾಯಧನ ನೀಡಬೇಕೆಂದು ಸಮಾಜ ಕಲ್ಯಾಣ ಇಲಾಖೆ ಪ್ರಸ್ತಾಪಿಸಿದೆ. ಅದರಂತೆ ಮಾನ್ಯ ಸದಸ್ಯರಾದ ಡಾ. ಉಮೇಶ್ ಜಾದವ್ ಇವರು ಸಹ ಇದಕ್ಕೆ ಸಹಮತ ವ್ಯಕ್ತಪಡಿಸಿ ಟ್ರಾಕ್ಟರ್‌ಗಳನ್ನು ಎಲ್ಲಾ ರೈತರು ಕೃಷಿ ಚಟುವಟಿಕೆಗಳಿಗಲ್ಲದೇ ಸಾಗಾಣಿಕೆಗೆ ಸಹ ಉಪಯೋಗಿಸಲಾಗುತ್ತಿದ್ದು, ಇದರಿಂದ ಸಾಲವನ್ನು ಮರು ಪಾವತಿಸಲು ಸಾಧ್ಯವಾಗುತ್ತದೆ. ಕಾರಣ ಈ ಪ್ರಸ್ತಾವನೆಯನ್ನು ಅನುಮೋದಿಸಬೇಕೆಂದು ಒತ್ತಾಯಿಸಿದರು.

ಲೋಕೋಪಯೋಗಿ ಸಚಿವರಾದ ಮಾನ್ಯ ಶ್ರೀ. ಹೆಚ್.ಡಿ. ರೇವಣ್ಣ ಇವರು ಪವರ್ ಟಿಲ್ಲರ್‌ಗೆ ಹೆಚ್ಚಿನ ಸಹಾಯಧನ ನೀಡಲು ಸಲಹೆ ನೀಡಿದರು. ಈಗಾಗಲೇ ಪವರ್ ಟಿಲ್ಲರ್‌ಗೆ ಶೇ.90 ರಷ್ಟು ಸಹಾಯಧನ ನೀಡಲಾಗುತ್ತಿದೆ ಎಂದು ಸಭೆಗೆ ತಿಳಿಸಲಾಯಿತು.

ಮಾನ್ಯ ಸದಸ್ಯರಾದ ಡಾ: ಕೆ. ಅನ್ನದಾನಿ ಇವರು ಮಾತನಾಡಿ ಕೃಷಿ ಇಲಾಖೆಯಿಂದ ಭೂ ರಹಿತ ಎಸ್.ಸಿ/ಎಸ್.ಟಿ ಕೃಷಿ ಕಾರ್ಮಿಕರಿಗೆ ಭೂ ಖರೀದಿ ಯೋಜನೆಯಡಿ ಜಮೀನು ಖರೀದಿಸುವುದು ಸೂಕ್ತವೆಂದು ಅಭಿಪ್ರಾಯ ವ್ಯಕ್ತಪಡಿಸಿದರು. ಮಾನ್ಯ ಸಮಾಜ ಕಲ್ಯಾಣ ಸಚಿವರು ಮಾತನಾಡಿ ಭೂ ಖರೀದಿ ಯೋಜನೆಯನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಮಾಡಲಾಗುತ್ತಿದೆ ಎಂದು ತಿಳಿಸಿ ಒಂದೇ ಕಾರ್ಯಕ್ರಮವನ್ನು ಬೇರೆ ಬೇರೆ ಇಲಾಖೆಗಳಿಂದ ಅನುಷ್ಠಾನಗೊಳಿಸುವುದು ಸೂಕ್ತವಲ್ಲವೆಂದು ತಿಳಿಸಿದರು.

**ಪರಿಷತ್ತಿನ ನಿರ್ಧಾರ:**

1) ಎಸ್.ಸಿ/ಎಸ್.ಟಿ ರೈತರಿಗೆ ಎಲ್ಲಾ ಸಾಮರ್ಥ್ಯದ ಟ್ರಾಕ್ಟರ್ ಗಳಿಗೆ ರೂ.3.00 ಲಕ್ಷ ಸಹಾಯಧನ ನೀಡುವುದು.
2) ಅರಣ್ಯ ಹಕ್ಕು ಕಾಯ್ದೆಯಡಿಯಲ್ಲಿ ಜಮೀನು ನೀಡಿದ ರೈತರ ವಿವರಗಳನ್ನು ಮತ್ತು ಗಂಗಾಕಲ್ಯಾಣ ಯೋಜನೆಯಡಿ ಕೊರೆದ ಕೊಳವೆಬಾವಿಗಳ ವಿವರಗಳನ್ನು ಕೃಷಿ ಇಲಾಖೆಗೆ ಸಮಾಜ ಕಲ್ಯಾಣ ಇಲಾಖೆಯ ಸಂಬಂಧಪಟ್ಟ ನಿಗಮದವರು ಒದಗಿಸುವುದು.
3) 2018-19 ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ: ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆ/ಸಮಾಜ ಕಲ್ಯಾಣ ಇಲಾಖೆ)**

**2. ತೋಟಗಾರಿಕೆ ಇಲಾಖೆ:-**

2018-19 ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ- ಎಸ್.ಸಿ.ಎಸ್.ಪಿ-ರೂ.128.19 ಕೋಟಿ, ಟಿ.ಎಸ್.ಪಿ- ರೂ.53.52 ಕೋಟಿ ಒಟ್ಟು ರೂ.181.71 ಕೋಟಿ.

ಈ ಕೆಳಕಂಡ ಕಾರ್ಯಕ್ರಮಗಳು ಮುಂದುವರೆದ ಕಾರ್ಯಕ್ರಮಗಳು

1) ಎಸ್.ಸಿ/ಎಸ್.ಟಿ ರೈತರಿಗೆ ಸಮಗ್ರ ಅಭಿವೃದ್ಧಿಗಾಗಿ ಕೃಷಿ ಹೊಂಡ, ತುಂತುರು, ಹನಿ ನೀರಾವರಿ ಸೌಲಭ್ಯಗಳನ್ನು ಶೇಕಡ 90 ರಷ್ಟು ಸಹಾಯಧನದೊಂದಿಗೆ ಅನುಷ್ಠಾನಗೊಳಿಸುವುದು.
2) ಪಾಲಿ ಹೌಸ್ ನಿರ್ಮಾಣ ಒಂದು ಎಕರೆಗೆ ಮಿತಿಗೊಳಿಸಿ ಸಹಾಯಧನ ಘಟಕ ವೆಚ್ಚದ: 90% ರಷ್ಟು ನೀಡಿ ಅನುಷ್ಠಾನಗೊಳಿಸುವುದು.

ಮಾನ್ಯ ಸದಸ್ಯರುಗಳು ಈ ಬಗ್ಗೆ ಮಾತನಾಡಿ ತೋಟಗಾರಿಕೆ ಇಲಾಖೆಗೆ ಹೆಚ್ಚಿನ ಅನುದಾನ ಒದಗಿಸಬೇಕೆಂದು ಮತ್ತು ಪಾಲಿ ಹೌಸ್ ಯೋಜನೆಯಡಿ ಹೆಚ್ಚಿನ ಸೌಲಭ್ಯ ನೀಡಬೇಕೆಂದು ಸೂಚಿಸಿದರು.

ಲೋಕೋಪಯೋಗಿ ಸಚಿವರಾದ ಮಾನ್ಯ ಶ್ರೀ. ಹೆಚ್.ಡಿ. ರೇವಣ್ಣ ಇವರು ಮಾತನಾಡಿ ಪ್ರತಿ ತಾಲ್ಲೂಕಿನಲ್ಲಿ ಎಸ್.ಸಿ/ಎ.ಟಿ ರೈತರಿಗೆ ಸುಮಾರು 100 ಎಕರೆಗಳಷ್ಟು ಜಮೀನುಗಳಲ್ಲಿ ತೋಟಗಾರಿಕೆಯನ್ನು MGNREGA ಕಾರ್ಯಕ್ರಮದಡಿ ಲಭ್ಯವಿರುವ ಅನುದಾನವನ್ನು ಉಪಯೋಗಿಸಿಕೊಂಡು ಅಭಿವೃದ್ಧಿ ಪಡಿಸಲು ಸೂಚಿಸಿದರು.

ಮಾನ್ಯ ಸದಸ್ಯರಾದ ಡಾ. ಉಮೇಶ್ ಜಾದವ್ ಇವರು ಮಾತನಾಡಿ ಪ್ರಸಕ್ತ ಸಾಲಿನಲ್ಲಿ ಬಾಗಲಕೋಟೆ ವಿಶ್ವವಿದ್ಯಾಲಯಕ್ಕೆ ಅನುದಾನ ಒದಗಿಸಿಲ್ಲವೆಂದು ಪ್ರಸ್ತಾಪಿಸಿದರು.

ಮಾನ್ಯ ಸದಸ್ಯರಾದ ಶ್ರೀ. ಆರ್. ಧ್ರುವನಾರಾಯಣ್ ರವರು ಮಾತನಾಡಿ ಇಸ್ರೇಲ್ ಮಾದರಿಯಂತೆ ಈ ಯೋಜನೆಯನ್ನು ಇತರೆ ಜಿಲ್ಲೆಗಳಿಗೆ ವಿಸ್ತರಿಸುವಂತೆ ಕೋರಿದರು.

ಮಾನ್ಯ ಸದಸ್ಯರಾದ ಶ್ರೀ ಧರ್ಮಸೇನ ಇವರು ಮಾತನಾಡಿ ತೋಟಗಾರಿಕೆ ಇಲಾಖೆಗೆ ಹೆಚ್ಚಿನ ಅನುದಾನ ನೀಡುವ ಬಗ್ಗೆ ಪರಿಶೀಲಿಸುವಂತೆ ತಿಳಿಸಿದರು.

**ಪರಿಷತ್ತಿನ ನಿರ್ಧಾರ:**

1) ಪಾಲಿ ಹೌಸ್ ನಿರ್ಮಾಣ ಒಂದು ಎಕರೆಗೆ ಮಿತಿಗೊಳಿಸಿ ಸಹಾಯಧನ ಘಟಕ ವೆಚ್ಚದ: 90% ರಷ್ಟು ಅಥವಾ ಗರಿಷ್ಠ ರೂ.25.00 ಲಕ್ಷಗಳಿಗೆ ಮಿತಿಗೊಳಿಸಿ ಅನುಷ್ಠಾನಗೊಳಿಸುವುದು.
2) ಅರಣ್ಯ ಹಕ್ಕು ಕಾಯ್ದೆಯಡಿಯಲ್ಲಿ ಜಮೀನು ನೀಡಿದ ರೈತರ ವಿವರಗಳನ್ನು ಮತ್ತು ಗಂಗಾಕಲ್ಯಾಣ ಯೋಜನೆಯಡಿ ಕೊರೆದ ಕೊಳವೆಭಾವಿಗಳ ವಿವರಗಳನ್ನು ತೋಟಗಾರಿಕೆ ಇಲಾಖೆಗೆ ಸಮಾಜ ಕಲ್ಯಾಣ ಇಲಾಖೆಯ ಸಂಬಂಧಪಟ್ಟ ನಿಗಮದವರು ಒದಗಿಸಲು.

2018-19 ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ: ಸರ್ಕಾರದ ಕಾರ್ಯದರ್ಶಿ, ತೋಟಗಾರಿಕೆ ಇಲಾಖೆ/ಸಮಾಜ ಕಲ್ಯಾಣ ಇಲಾಖೆ)**

**3. ರೇಷ್ಮೆ ಇಲಾಖೆ:-**

2018-19 ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ- ಎಸ್.ಸಿ.ಎಸ್.ಪಿ-ರೂ.17.38 ಕೋಟಿ, ಟಿ.ಎಸ್.ಪಿ- ರೂ.9.97 ಕೋಟಿ ಒಟ್ಟು ರೂ.27.35 ಕೋಟಿ.

ಈ ಕೆಳಕಂಡ ಕಾರ್ಯಕ್ರಮಗಳು ಮುಂದುವರೆದ ಕಾರ್ಯಕ್ರಮಗಳು

1) ರೇಷ್ಮೆ ಹುಳು ಸಾಕಣಿಕೆ ಮನೆ ನಿರ್ಮಾಣ, ಸಲಕರಣೆ ನೀಡುವುದು.
2) ಕಾಟೇಜ್ ಯಂತ್ರ ಮತ್ತು ಮಲ್ಟಿ ಹ್ಯಾಂಡ್ ಘಟಕಗಳನ್ನು ಸ್ಥಾಪಿಸುವುದು.
3) ರೀಲಿಂಗ್ ಶೆಡ್‌ಗಳನ್ನು ನಿರ್ಮಿಸುವುದು.

ಮಾನ್ಯ ಲೋಕೋಪಯೋಗಿ ಸಚಿವರು ಮಾತನಾಡಿ ರೇಷ್ಮೆ ಸಾಕಾಣಿಕೆಗೆ ಬಹಳಷ್ಟು ಬೇಡಿಕೆಯಿದ್ದು ಇನ್ನು ಹೆಚ್ಚುವರಿ ಅನುದಾನ ಒದಗಿಸಲು ಸೂಚಿಸಿದರು.

ಮಾನ್ಯ ಸಮಾಜ ಕಲ್ಯಾಣ ಸಚಿವರು ಸಚಿವರು ಉತ್ತರಿಸುತ್ತಾ ಹಿಂದಿನ ಸಾಲಿನಲ್ಲಿ ಹೆಚ್ಚು ಹಂಚಿಕೆ ಮಾಡಿದ್ದು, ಅದನ್ನು ಪೂರ್ಣ ಪ್ರಮಾಣದಲ್ಲಿ ವೆಚ್ಚ ಮಾಡಿಲ್ಲವೆಂದು ತಿಳಿಸಿದರು.

2018-19 ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ: ಸರ್ಕಾರದ ಕಾರ್ಯದರ್ಶಿ, ರೇಷ್ಮೆ ಇಲಾಖೆ)**

(50)

4. **ಪಶು ಸಂಗೋಪನೆ ಇಲಾಖೆ :-**

2018-19 ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ- ಎಸ್.ಸಿ.ಎಸ್.ಪಿ-ರೂ.239.29 ಕೋಟಿ, ಟಿ.ಎಸ್.ಪಿ- ರೂ.115.59 ಕೋಟಿ ಒಟ್ಟು ರೂ.355.08 ಕೋಟಿ.

ಈ ಕೆಳಕಂಡ ಕಾರ್ಯಕ್ರಮಗಳು ಮುಂದುವರೆದ ಕಾರ್ಯಕ್ರಮಗಳು

1) ಹಾಲು ಉತ್ಪಾದಕರ ಪ್ರೋತ್ಸಾಹಧನ ರೂ.5/- ಪ್ರತಿ ಲೀಟರ್‌ಗೆ
2) ಹೈನುಗಾರಿಕೆ ಯೋಜನೆಯಡಿ ಘಟಕ ವೆಚ್ಚ ರೂ. 1.20 ಲಕ್ಷದಲ್ಲಿ ಶೇ.75 ರಷ್ಟು ಸಹಾಯಧನ ನೀಡಿ ಎರಡು ಹಸು/ಎಮ್ಮೆಗಳನ್ನು ನೀಡುವುದು.
3) ಕುರಿ / ಮೇಕೆ / ಹಂದಿ ಇತ್ಯಾದಿಗಳಿಗೆ ಹಾಲಿ ಇರುವ ಶೇ.50 ರ ಬದಲು ಶೇ.90 ರಷ್ಟು ಸಹಾಯಧನ, ಶೇ.10 ರಷ್ಟು ಫಲಾನುಭವಿಗಳ ವಂತಿಕೆ (ಗರಿಷ್ಠ ರೂ.60,000/-) (10+1)
4) ಕುರಿ/ಮೇಕೆ ಆಕಸ್ಮಿಕ ಮರಣಕ್ಕೆ ಗರಿಷ್ಟ ರೂ. 5000/-ಗಳ ಪರಿಹಾರ ಧನ.
5) ಪಶುವೈದ್ಯಕೀಯ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡುತ್ತಿರುವ ಪ.ಜಾತಿ/ಪಂಗಡದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ.

ಉಳಿದ ಕಾರ್ಯಕ್ರಮಗಳು ಕ್ರಿಯಾಯೋಜನೆಯಲ್ಲಿ ವಿವರಿಸಲಾಗಿದೆ.

ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿ ಕುರಿ, ಮೇಕೆ ಆಕಸ್ಮಿಕ ಮರಣಕ್ಕೆ ಪರಿಹಾರಧನ ಒದಗಿಸುವ ಪ್ರಕ್ರಿಯೆಯನ್ನು ಸರಳಗೊಳಿಸುವಂತೆ ಸೂಚಿಸಿದರು.

**ಪರಿಷತ್ತಿನ ನಿರ್ಧಾರ:-**

1) ಮೊರಾರ್ಜಿ ದೇಸಾಯಿ ವಸತಿ ಶಾಲೆ/ಆಶ್ರಮ ವಸತಿ ಶಾಲೆಗಳಲ್ಲಿ ಕ್ಷೀರ ಭಾಗ್ಯ ಯೋಜನೆಯನ್ನು ಅನುಷ್ಠಾನಗೊಳಿಸುವುದು.

2018-19 ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ: ಸರ್ಕಾರದ ಕಾರ್ಯದರ್ಶಿ, ಪಶುಸಂಗೋಪನೆ ಇಲಾಖೆ)**

5. **ಮೀನುಗಾರಿಕೆ ಇಲಾಖೆ:-**

2018-19 ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ- ಎಸ್.ಸಿ.ಎಸ್.ಪಿ-ರೂ.1.40 ಕೋಟಿ, ಟಿ.ಎಸ್.ಪಿ- ರೂ.1.57 ಕೋಟಿ ಒಟ್ಟು ರೂ.2.97 ಕೋಟಿ.

ಈ ಕೆಳಕಂಡ ಕಾರ್ಯಕ್ರಮಗಳು ಮುಂದುವರೆದ ಕಾರ್ಯಕ್ರಮಗಳು

1) ಮೀನುಗಾರಿಕೆ ಕಿಟ್‌ಗಳನ್ನು ನೀಡುವುದು.
2) ಮೀನು ಮಾರಾಟ ಮಳಿಗೆಗಳನ್ನು ಸ್ಥಾಪಿಸಲು ಗರಿಷ್ಠ ರೂ. 7.00 ಲಕ್ಷದವರೆಗೆ ಸಹಾಯಧನ ನೀಡುವುದು.
3) ಮೀನು ಸಾಕಾಣಿಕೆಗಾಗಿ ಮೀನುಮರಿಗಳನ್ನು ಒದಗಿಸುವುದು.

ಮಾನ್ಯ ಸದಸ್ಯರಾದ ಡಾ: ಕೆ. ಅನ್ನದಾನಿ ಇವರು ಮಾತನಾಡಿ ಮೀನು ಮಾರಾಟ ಘಟಕಗಳ ಸ್ಥಾಪನೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕೆಂದು ಸೂಚಿಸಿದರು.

**ಪರಿಷತ್ತಿನ ನಿರ್ಧಾರ:-**

1) 2018-19 ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ/ಪಂಗಡದ ಫಲಾನುಭವಿಗಳಿಗೆ ಸಂಚಾರಿ ಮೀನು ಕೆಫೆಟೇರಿಯಾ ಸ್ಥಾಪಿಸಲು ಗರಿಷ್ಠ ರೂ. 7.00 ಲಕ್ಷ ಧನಸಹಾಯ ನೀಡುವುದು.
2) 2018-19 ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ: ಸರ್ಕಾರದ ಕಾರ್ಯದರ್ಶಿ, ಮೀನುಗಾರಿಕೆ ಇಲಾಖೆ)**

**6. ಸಾರಿಗೆ ಇಲಾಖೆ :-**

2018-19 ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ- ಎಸ್.ಸಿ.ಎಸ್.ಪಿ-ರೂ.163.42 ಕೋಟಿ, ಟಿ.ಎಸ್.ಪಿ- ರೂ.80.92 ಕೋಟಿ ಒಟ್ಟು ರೂ.244.34 ಕೋಟಿ.

ಈ ಕೆಳಕಂಡ ಕಾರ್ಯಕ್ರಮಗಳು ಮುಂದುವರೆದ ಕಾರ್ಯಕ್ರಮಗಳು

1) ಪ.ಜಾತಿ/ಪಂಗಡದ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ವಿತರಿಸುವುದು.
2) ಭಾರಿ ಮತ್ತು ಲಘು ವಾಹನ ಚಾಲನಾ ತರಬೇತಿ - ಪ.ಜಾತಿ/ಪ.ಪಂಗಡದ ಯುವಕ/ಯುವತಿಯರಿಗೆ ಉಚಿತವಾಗಿ ನೀಡುವುದು.
3) ಮೀಸಲಾತಿ ಕ್ಷೇತ್ರಗಳಲ್ಲಿ ಬಸ್ ನಿಲ್ದಾಣ/ತಂಗುದಾಣ ನಿರ್ಮಾಣ

ಮಾನ್ಯ ಲೋಕೋಪಯೋಗಿ ಸಚಿವರು ಮಾತನಾಡಿ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ವಿತರಣೆ ಕಾರ್ಯಕ್ರಮ ಅತ್ಯಂತ ಪ್ರಮುಖವೆಂದು ಹೇಳಿದರು.

ಮಾನ್ಯ ಸಮಾಜ ಕಲ್ಯಾಣ ಸಚಿವರು ಮಾತನಾಡಿ ಸಾರಿಗೆ ಇಲಾಖೆ ಉಚಿತ ಬಸ್ ಪಾಸ್ ಕಾರ್ಯಕ್ರಮಕ್ಕೆ ಹೆಚ್ಚುವರಿ ಅನುದಾನ ಕೋರಿದ್ದು, ಇದನ್ನು ಪ್ರಸ್ತುತ ವರ್ಷಕ್ಕೆ ಸೀಮಿತಗೊಳಿಸಬೇಕೆಂದು ತಿಳಿಸಿದರು.

**ಪರಿಷತ್ತಿನ ನಿರ್ಧಾರ:-**

1) ಉಚಿತ ಬಸ್ ಪಾಸ್ ವಿತರಣೆ ಕಾರ್ಯಕ್ರಮಕ್ಕೆ ಸಾರಿಗೆ ಇಲಾಖೆ ಇವರು ಹೆಚ್ಚುವರಿಯಾಗಿ ಎಸ್.ಸಿ.ಎಸ್.ಪಿ ರಡಿ ರೂ.120.00 ಕೋಟಿ ಮತ್ತು ಟಿ.ಎಸ್.ಪಿ ರಡಿ ರೂ.28.00 ಕೋಟಿ ಒದಗಿಸಲು ಕೋರಿರುತ್ತಾರೆ. ಈ ಬಗ್ಗೆ ಇತರ ಇಲಾಖೆಗಳಲ್ಲಿ ಆದ್ಯರ್ಪಣೆ ಮಾಡುವ ಅನುದಾನದಿಂದ ಆರ್ಥಿಕ ಇಲಾಖೆಯ ಮೂಲಕ ಮರುಹಂಚಿಕೆ ಮಾಡುವುದು.

2018-19 ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಾರಿಗೆ ಇಲಾಖೆ/ಸಮಾಜ ಕಲ್ಯಾಣ ಇಲಾಖೆ/ ಆರ್ಥಿಕ ಇಲಾಖೆ)**

(54)

## 7. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ:-

2018-19 ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ- ಎಸ್.ಸಿ.ಎಸ್.ಪಿ-ರೂ.1847.17 ಕೋಟಿ, ಟಿ.ಎಸ್.ಪಿ- ರೂ.887.67 ಕೋಟಿ ಒಟ್ಟು ರೂ.2734.84 ಕೋಟಿ.

ಈ ಕೆಳಕಂಡ ಕಾರ್ಯಕ್ರಮಗಳು ಮುಂದುವರೆದ ಕಾರ್ಯಕ್ರಮಗಳು

1) ಪ.ಜಾತಿ / ಪ.ಪಂಗಡ ಕುಟುಂಬಗಳಿಗೆ ಶೌಚಾಲಯ ಮತ್ತು ಸ್ನಾನದ ಗೃಹ ನಿರ್ಮಾಣ ಮಾಡಲು ಒಟ್ಟು ರೂ.20,000/- ನೀಡಲಾಗುತ್ತದೆ. (ಶೌಚಾಲಯ ಘಟಕ ವೆಚ್ಚ: ರೂ.12,000 + 3,000 ಮತ್ತು ಶೌಚಾಲಯದೊಂದಿಗೆ ಸ್ನಾನದ ಗೃಹ : ರೂ.12,000 + 3,000 + 5,000)
2) ಪ.ಜಾತಿ/ಪಂಗಡದ ಕಾಲೋನಿಗಳಲ್ಲಿ ನೀರು ಸರಬರಾಜು ಮತ್ತು ನೀರು ಶುದ್ಧಿಕರಣ ಘಟಕ ಸ್ಥಾಪನೆ.
3) ಪ.ಜಾತಿ/ಪಂಗಡದ ಕಾಲೋನಿಗಳಿಗೆ ಸಂಪರ್ಕ ರಸ್ತೆ, ಸಿ.ಸಿ ಚರಂಡಿ, ಸಿಸಿ ರಸ್ತೆ ನಿರ್ಮಾಣ ಕಾಮಗಾರಿ ನರೇಗಾ ಯೋಜನೆ ಮತ್ತು ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತದೆ.

ಮಾನ್ಯ ಸಮಾಜ ಕಲ್ಯಾಣ ಸಚಿವರು ಮಾತನಾಡಿ ಪ್ರಸ್ತುತ ಸಾಲಿನಲ್ಲಿ ಪ್ರಗತಿ ಕಾಲೋನಿ ಎಂಬ ಹೊಸ ಯೋಜನೆಯನ್ನು ರೂಪಿಸಲಾಗಿದ್ದು, ಪರಿಶಿಷ್ಟ ಜಾತಿ/ಪಂಗಡದ ಕಾಲೋನಿ/ತಾಂಡಾಗಳ ಅಭಿವೃದ್ಧಿ ಕೈಗೊಳ್ಳಲಾಗುವುದೆಂದು ತಿಳಿಸಿದರು. ಹೆಚ್ಚಿನ ಎಸ್.ಸಿ/ಎಸ್.ಟಿ ಜನಸಂಖ್ಯೆ ಇರುವ ಕಾಲೋನಿಗಳನ್ನು ಆಯ್ಕೆ ಮಾಡಲಾಗುವುದೆಂದು ತಿಳಿಸಿದರು.

ಮಾನ್ಯ ಉನ್ನತ ಶಿಕ್ಷಣ ಸಚಿವರು ಮಾತನಾಡಿ ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆಯಡಿ ಬಾಕಿಯಿರುವ ಕಾಮಗಾರಿಗಳನ್ನು ಪೂರ್ಣಗೊಳಿಸುವಂತೆ ಹಾಗೂ ಮುಂದಿನ ಸಾಲುಗಳಲ್ಲಿ ಕಾಮಗಾರಿಗಳನ್ನು ಆಯಾ ವರ್ಷದಲ್ಲಿಯೇ ಪೂರ್ಣಗೊಳಿಸಬೇಕೆಂದು ಸೂಚಿಸಿದರು.

ಮಾನ್ಯ ಸದಸ್ಯರಾದ ಶ್ರೀ. ಆರ್. ಧ್ರುವನಾರಾಯಣ್ ಇವರು ಮಾತನಾಡಿ ಸಿ.ಸಿ. ರಸ್ತೆ ಮತ್ತು ಚರಂಡಿ ಕಾಮಗಾರಿಗಳನ್ನು ವಿವಿಧ ಇಲಾಖೆಗಳು ಅನುಷ್ಟಾನಗೊಳಿಸುತ್ತಿದ್ದು, ಡೂಪ್ಲಿಕೇಷನ್ ಆಗದಂತೆ ಎಚ್ಚರವಹಿಸಲು ಸೂಚಿಸಿದರು.

ಮಾನ್ಯ ಸದಸ್ಯರಾದ ಡಾ: ಕೆ. ಅನ್ನದಾನಿ ಇವರು ಮಾತನಾಡಿ ಆರ್.ಡಿ.ಪಿ.ಆರ್ ಇಲಾಖೆಗೆ ಒದಗಿಸಿದ ಅನುದಾನದಲ್ಲಿ ಮೀಸಲು ಕ್ಷೇತ್ರಗಳಿಗೆ ಆದ್ಯತೆ ನೀಡಿ ಹೆಚ್ಚು ಅನುದಾನ ಒದಗಿಸಲು ಕೋರಿದರು. ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿ ಕಾರ್ಯಕ್ರಮಗಳ ಮಾರ್ಗಸೂಚಿಯಂತೆ ಅನುಷ್ಟಾನಗೊಳಿಸಲು ಸೂಚಿಸಿದರು ಮತ್ತು ಬಾಕಿಯಿರುವ ಕಾಮಗಾರಿಗಳನ್ನು ಮುಂದಿನ ಸಾಲುಗಳಲ್ಲಿ ಪ್ರಗತಿಯಲ್ಲಿರುವ ಕಾಮಗಾರಿಗಳೆಂದು ಬಿಂಬಿಸಬಾರದೆಂದು ತಿಳಿಸಿದರು.

ಗ್ರಾಮೀಣ ನೀರು ಸರಬರಾಜು ಯೋಜನೆಯಡಿಯಲ್ಲಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯನ್ನು ಕೈಗೆತ್ತಿಕೊಳ್ಳುವುದು.

ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿಯಲ್ಲಿ ಒದಗಿಸಿದ ರೂ. 173.31 ಕೋಟಿಗಳನ್ನು ವೆಚ್ಚ ಮಾಡಲು ಸಾಧ್ಯವಾಗದೇ ಇರುವುದರಿಂದ ಅದನ್ನು ಪ್ರಗತಿ ಕಾಲೋನಿ ಯೋಜನೆಗೆ ಬಳಸಿಕೊಳ್ಳಲು ಪ್ರಸ್ತಾವನೆಯನ್ನು ಸಮಾಜ ಕಲ್ಯಾಣ ಇಲಾಖೆಗೆ ಕಳುಹಿಸಲು ತೀರ್ಮಾನಿಸಲಾಯಿತು.

2018-19 ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ)**

**8. ಅರಣ್ಯ ಇಲಾಖೆ :-**

2018-19 ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ- ಎಸ್.ಸಿ.ಎಸ್.ಪಿ-ರೂ.26.16 ಕೋಟಿ, ಟಿ.ಎಸ್.ಪಿ- ರೂ.31.75 ಕೋಟಿ ಒಟ್ಟು ರೂ.57.91 ಕೋಟಿ.

ಈ ಕೆಳಕಂಡ ಕಾರ್ಯಕ್ರಮಗಳು ಮುಂದುವರೆದ ಕಾರ್ಯಕ್ರಮಗಳು

1) ಅರಣ್ಯ/ಅರಣ್ಯದಂಚಿನ ಗ್ರಾಮಗಳಲ್ಲಿರುವ ಪ.ಜಾತಿ/ಪ.ಪಂಗಡದ ಕುಟುಂಬಗಳಿಗೆ ಎಲ್.ಪಿ.ಜಿ ಸಂಪರ್ಕ ಕಲ್ಪಿಸುವುದು
2) ರಿಯಾಯಿತಿ ದರದಲ್ಲಿ ಬಿದಿರು ಸರಬರಾಜು, ಸೋಲಾರ್ ಲ್ಯಾಂಪ್, ಸೋಲಾರ್ ಹೀಟರ್, ಜೇನು ಸಾಕಾಣಿಕೆ ಪೆಟ್ಟಿಗೆ ವಿತರಣೆ.
3) ಪ.ಪಂಗಡದವರಿಗೆ ಅರಣ್ಯ ಕಿರು ಉತ್ಪನ್ನಗಳ ಸಂಗ್ರಹಣಾ ತರಬೇತಿ ನೀಡುವುದು.

ಮಾನ್ಯ ಸದಸ್ಯರಾದ ಶ್ರೀ. ಆರ್ ಧ್ರುವನಾರಾಯಣ ಇವರು ಮಾತನಾಡಿ ಎಲ್.ಪಿ.ಜಿ ಸಂಪರ್ಕ ಕಲ್ಪಿಸುವ ಯೋಜನೆ ಉತ್ತಮವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮಾನ್ಯ ಲೋಕೋಪಯೋಗಿ ಸಚಿವರು, ಅರಣ್ಯ ಇಲಾಖೆಗೆ ಇನ್ನು ಹೆಚ್ಚಿನ ಅನುದಾನ ಒದಗಿಸುವಂತೆ ಕೋರಿದರು.

ಸದಸ್ಯರಾದ ಮಾನ್ಯ ಶ್ರೀ. ಹೆಚ್. ಕೆ. ಕುಮಾರಸ್ವಾಮಿ ಇವರು ಮಾತನಾಡಿ ಸಕಲೇಶಪುರದಲ್ಲಿ ಹೆಚ್ಚಿನ ಅರಣ್ಯ ಪ್ರದೇಶವಿರುವುದರಿಂದ ವಿಶೇಷ ಆದ್ಯತೆ ನೀಡಲು ಕೋರಿದರು.

ಸದಸ್ಯರಾದ ಮಾನ್ಯ ಡಾ: ಉಮೇಶ್ ಜಾದವ್ ಇವರು ಮಾತನಾಡಿ ಚಿಂಚೋಳಿ ಕ್ಷೇತ್ರದಲ್ಲಿ ಹೆಚ್ಚಿನ ಅರಣ್ಯ ಪ್ರದೇಶವಿರುವುದರಿಂದ ವಿಶೇಷ ಆದ್ಯತೆ ನೀಡಲು ಕೋರಿದರು.

2018-19 ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ ಇಲಾಖೆ)**

**9. ಸಹಕಾರ ಇಲಾಖೆ:-**

2018-19 ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ- ಎಸ್.ಸಿ.ಎಸ್.ಪಿ-ರೂ.201.71 ಕೋಟಿ, ಟಿ.ಎಸ್.ಪಿ- ರೂ.194.73 ಕೋಟಿ ಒಟ್ಟು ರೂ.396.44 ಕೋಟಿ.

ಈ ಕೆಳಕಂಡ ಕಾರ್ಯಕ್ರಮಗಳು ಮುಂದುವರೆದ ಕಾರ್ಯಕ್ರಮಗಳು

1) ಬೆಳೆ ಸಹಾಯಕ್ಕಾಗಿ ಬಡ್ಡಿ ಸಹಾಯಧನ.
2) ಸಾಲದ ಬಡ್ಡಿ ಮನ್ನಾ.
3) ಯಶಸ್ವಿನಿ ಕಾರ್ಯಕ್ರಮ.
4) ಪ.ಜಾತಿ / ಪ.ಪಂಗಡ ಹಮಾಲರಿಗೆ ಮನೆಗಳ ನಿರ್ಮಾಣ. (ಬಹುಮಹಡಿ ವಸತಿ ಸಂಕೀರ್ಣ – ಘಟಕ ವೆಚ್ಚ ರೂ. 5.00 ಲಕ್ಷ)
5) ಪ.ಜಾತಿ / ಪ.ಪಂಗಡ ಸಹಕಾರ ಸಂಘಗಳಿಗೆ ಷೇರು ಬಂಡವಾಳ ನೀಡುವ ಬಗ್ಗೆ

ಬೆಳೆ ಸಹಾಯಕ್ಕಾಗಿ ಬಡ್ಡಿ ಸಹಾಯಧನ ಯೋಜನೆಯಡಿಯಲ್ಲಿ ಎಸ್.ಸಿ.ಎಸ್.ಪಿ ಯಡಿಯಲ್ಲಿ ರೂ. 121.56 ಕೋಟಿ ಮತ್ತು ಟಿ.ಎಸ್.ಪಿ ಯಡಿಯಲ್ಲಿ ರೂ. 42.32 ಕೋಟಿ ಅನುದಾನವನ್ನು

ಆದ್ಯರ್ಪಿಸುವುದು. ಇದನ್ನು ಇತರೇ ಕಾರ್ಯಕ್ರಮಗಳಿಗೆ ವಿನಿಯೋಗಿಸುವ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಸಚಿವರು ಪ್ರತ್ಯೇಕವಾಗಿ ಸಭೆ ನಡೆಸಿ ತೀರ್ಮಾನಿಸುವುದು.

ಸಹಕಾರ ಇಲಾಖೆಯಡಿಯಲ್ಲಿ ಬರುವ ಎ.ಪಿ.ಎಂ.ಸಿ ಆವರಣಗಳಲ್ಲಿ ಪ.ಜಾತಿ/ಪ.ಪಂಗಡ ಹಮಾಲಿಗಳಿಗೆ ಮನೆಗಳನ್ನು ನಿರ್ಮಿಸಲು ಸುಮಾರು ರೂ. 100 ಕೋಟಿಗಳನ್ನು ಸಹಕಾರ ಇಲಾಖೆಯಲ್ಲಿ ಉಳಿಕೆಯಾಗುವ ಅನುದಾನವನ್ನು ಉಪಯೋಗಿಸಲು ಅನುಮತಿ ನೀಡಬೇಕೆಂದು ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ ಇವರು ಕೋರಿದರು.

ಮಾನ್ಯ ಸದಸ್ಯರಾದ ಶ್ರೀ. ಆರ್. ಧ್ರುವನಾರಾಯಣ ಇವರು ಮಾತನಾಡಿ ಪ.ಜಾತಿ/ಪ.ಪಂಗಡ ಹಮಾಲಿಗಳಿಗೆ ಮನೆಗಳನ್ನು ನಿರ್ಮಿಸಲು ಬೇರೆ ಕಾರ್ಯಕ್ರಮಗಳಲ್ಲಿ ಉಳಿಕೆಯಾಗಿರುವ ಅನುದಾನದಲ್ಲಿ ಒದಗಿಸುವಂತೆ ಕೋರಿದರು ಮತ್ತು ಕೋ-ಆಪರೇಟೀವ್ ಸೊಸೈಟಿಗಳಲ್ಲಿ ಪ.ಜಾತಿ/ಪ.ಪಂಗಡ ಸದಸ್ಯರನ್ನು ಹೆಚ್ಚಿನ ಸಂಖ್ಯೆಯಲ್ಲಿ ಸೇರಿಸಲು ಆಂದೋಲನ ರೂಪದಲ್ಲಿ ಕೆಲಸ ಮಾಡಬೇಕೆಂದು ಸಲಹೆ ನೀಡಿದರು.

2018-19 ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ)**

**10. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:-**

2018-19 ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ- ಎಸ್.ಸಿ.ಎಸ್.ಪಿ-ರೂ.93.21 ಕೋಟಿ, ಟಿ.ಎಸ್.ಪಿ- ರೂ.67.93 ಕೋಟಿ ಒಟ್ಟು ರೂ.161.16 ಕೋಟಿ.

ಈ ಕೆಳಕಂಡ ಕಾರ್ಯಕ್ರಮಗಳು ಮುಂದುವರೆದ ಕಾರ್ಯಕ್ರಮಗಳು

1) ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ವಸತಿ ನಿಲಯಗಳಲ್ಲಿ ಪ.ಜಾತಿ/ಪ.ಪಂಗಡದ ವಿದ್ಯಾರ್ಥಿಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಮತ್ತು ವಸತಿ ಶಾಲೆ/ವಸತಿ ನಿಲಯಗಳ ಕಟ್ಟಡ ನಿರ್ಮಾಣ. ಆದರೆ ಕಡ್ಡಾಯವಾಗಿ ಶೇ.25 ರಷ್ಟು ಪ.ಜಾತಿ/ಪ.ಪಂಗಡ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವುದು.

ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡುತ್ತಾ ಪರಿಶಿಷ್ಟ ಜಾತಿ/ಪಂಗಡದ ವಿದ್ಯಾರ್ಥಿನಿಲಯಗಳಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೂ ಸಹ ಸ್ಥಳಾವಕಾಶ ಕಲ್ಪಿಸಬೇಕಿದೆ ಎಂದು ತಿಳಿಸಿದರು.

ಆದರೆ ಈಗಾಗಲೇ ಶೇ. 25 ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಕಲ್ಪಿಸಲು ಸರ್ಕಾರದ ಆದೇಶ ಆಗಿರುತ್ತದೆ ಎಂದು ಸದರಿ ಸಭೆಗೆ ತಿಳಿಸಲಾಗಿದೆ.

2018-19 ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ: ಸರ್ಕಾರದ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ)**

**11. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ :-**

2018-19 ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ- ಎಸ್.ಸಿ.ಎಸ್.ಪಿ-ರೂ.1255.36 ಕೋಟಿ, ಟಿ.ಎಸ್.ಪಿ- ರೂ.510.82 ಕೋಟಿ ಒಟ್ಟು ರೂ.1766.18 ಕೋಟಿ.

ಈ ಕೆಳಕಂಡ ಕಾರ್ಯಕ್ರಮಗಳು ಮುಂದುವರೆದ ಕಾರ್ಯಕ್ರಮಗಳು

1) ಅಂಗನವಾಡಿ ಮಕ್ಕಳಿಗೆ ಪೌಷ್ಠಿಕ ಆಹಾರ ವಿತರಣೆ.
2) ಭಾಗ್ಯಲಕ್ಷ್ಮಿ ಯೋಜನೆ.
3) ಸ್ತ್ರೀ ಶಕ್ತಿ ಗುಂಪುಗಳಿಗೆ ರೂ. 5000/- ಸುತ್ತು ನಿಧಿ.
4) ಉದ್ಯೋಗಿನಿ ಕಾರ್ಯಕ್ರಮದಡಿಯಲ್ಲಿ ಗರಿಷ್ಠ 1.50 ಲಕ್ಷ ಸಹಾಯಧನ ನೀಡುವುದು.
5) ವಿಕಲಚೇತನರಿಗೆ ಪಿಂಚಣಿ/ಸಲಕರಣೆಗಳು/ದ್ವಿಚಕ್ರ ವಾಹನ ಇತ್ಯಾದಿಗಳನ್ನು ನೀಡುವುದು.
6) ವಿಕಲಚೇತನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ.
7) ಎನ್.ಜಿ.ಓ ಗಳಿಗೆ ಸಹಾಯಧನ.
8) ದೇವದಾಸಿಯರಿಗೆ ಮಾಸಾಶನ ಮತ್ತು ಮನೆಗಳ ನಿರ್ಮಾಣ
9) ಉಳಿದ ಕಾರ್ಯಕ್ರಮಗಳು ಮುಂದುವರೆದ ಕಾರ್ಯಕ್ರಮಗಳಾಗಿರುತ್ತದೆ.
10) ಲೈಂಗಿಕ ಕಾರ್ಯಕರ್ತೆಯರಿಗೆ ಸ್ವಯಂ ಉದ್ಯೋಗ ಕಲ್ಪಿಸಲು ರೂ. 50000/- ಸಹಾಯಧನ/ಸಾಲ

ಐ.ಸಿ.ಡಿ.ಎಸ್ ಯೋಜನೆಯಡಿಯಲ್ಲಿ ಎಸ್.ಸಿ.ಎಸ್.ಪಿ ಯಡಿಯಲ್ಲಿ ರೂ. 120.00 ಕೋಟಿ ಮತ್ತು ಟಿ.ಎಸ್.ಪಿ ಯಡಿಯಲ್ಲಿ ರೂ. 40.00 ಕೋಟಿ ಹಾಗೂ ಭಾಗ್ಯಲಕ್ಷ್ಮಿ ಯೋಜನೆಯಡಿ ಟಿ.ಎಸ್.ಪಿ ಯಲ್ಲಿ ರೂ. 15.00 ಕೋಟಿ ಅನುದಾನವನ್ನು ಆದ್ಯರ್ಪಿಸುವುದು. ಇದನ್ನು ಇತರೇ ಕಾರ್ಯಕ್ರಮಗಳಿಗೆ ವಿನಿಯೋಗಿಸುವ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಸಚಿವರು ಪ್ರತ್ಯೇಕವಾಗಿ ಸಭೆ ನಡೆಸಿ ತೀರ್ಮಾನಿಸುವುದು.

ವಿಕಲಚೇತನರಿಗೆ ದ್ವಿಚಕ್ರ ವಾಹನ ಇತ್ಯಾದಿ ಸಲಕರಣೆಗಳನ್ನು ಬೇಡಿಕೆ ಅನುಸಾರ ಎಲ್ಲರಿಗೂ ಏಕಕಾಲದಲ್ಲಿ ನೀಡುವಂತೆ ಮಾಡುವುದು ಉತ್ತಮವೆಂದು ಮಾನ್ಯ ಸದಸ್ಯರುಗಳು ಅಭಿಪ್ರಾಯ ಪಟ್ಟರು. ಮಾನ್ಯ ಮುಖ್ಯ ಮಂತ್ರಿಗಳು ಸಹ ಇದಕ್ಕೆ ಬೆಂಬಲ ನೀಡಿ ಸೂಕ್ತ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಇಲಾಖೆಗೆ ಸೂಚಿಸಿದರು.

2018-19ನೇ ಸಾಲಿನಲ್ಲಿ ದೇವದಾಸಿಯರು ಮುಖ್ಯವಾಗಿ ಪ.ಜಾತಿ/ಪಂಗಡಕ್ಕೆ ಸೇರಿರುವುದರಿಂದ ವಸತಿ ನಿರ್ಮಾಣಕ್ಕೆ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದಿಂದ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ರೂ. 1.75 ಲಕ್ಷ / ರೂ. 2.00 ಲಕ್ಷಗಳನ್ನು ನೀಡಲು ಮತ್ತು ಅಷ್ಟೇ ಮೊತ್ತವನ್ನು ಮಹಿಳಾ ಮತ್ತು ಮಕ್ಕಳ ಇಲಾಖೆಯಿಂದ ನೀಡಲು ಅನುಮೋದನೆ ನೀಡಲಾಯಿತು.

2018-19 ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ)**

**12. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ :-**

2018-19 ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ- ಎಸ್.ಸಿ.ಎಸ್.ಪಿ-ರೂ.8.80 ಕೋಟಿ, ಟಿ.ಎಸ್.ಪಿ- ರೂ.2.23 ಕೋಟಿ ಒಟ್ಟು ರೂ. 11.03 ಕೋಟಿ.

ಈ ಕೆಳಕಂಡ ಕಾರ್ಯಕ್ರಮಗಳು ಮುಂದುವರೆದ ಕಾರ್ಯಕ್ರಮಗಳು

1) ಪರಿಶಿಷ್ಟ ಜಾತಿ/ಪಂಗಡದ ಪತ್ರಕರ್ತರಿಗೆ ಬಾಕಿ ಇರುವ ಪ್ರಕರಣಗಳಲ್ಲಿ ಮೀಡಿಯಾ ಕಿಟ್ ಒದಗಿಸುವುದು.
2) ಪರಿಶಿಷ್ಟ ಜಾತಿ/ಪಂಗಡದ ನಿರ್ಮಾಪಕರು ನಿರ್ಮಿಸುವ ಆಯ್ಕೆಯಾದ ಚಲನಚಿತ್ರಗಳಿಗೆ ಪ್ರೋತ್ಸಾಹಧನ ನೀಡುವುದು.
3) ಪ.ಜಾತಿ ಪತ್ರಿಕಾ ಸಂಪಾದಕರಿಗೆ ಮುದ್ರಣಕ್ಕೆ ಅಗತ್ಯವಾದ Editing ಕಾರ್ಯಕ್ಕಾಗಿ ಯಂತ್ರೋಪಕರಣಗಳನ್ನು ಖರೀದಿಸಲು
4) ಪ.ಜಾತಿ/ಪಂಗಡದವರಿಗೆ ಸರ್ಕಾರಿ ಯೋಜನೆಗಳ ಬಗ್ಗೆ ಜಾಹಿರಾತು ವೆಚ್ಚ ಭರಿಸುವುದು.

ಇದರೊಂದಿಗೆ, ಜರ್ನಲಿಸಮ್ ಕೋರ್ಸ್ ಪೂರ್ಣಗೊಳಿಸಿದ ಪ.ಜಾತಿ/ಪಂಗಡದ ಅಭ್ಯರ್ಥಿಗಳಿಗೆ ಕ್ಷೇತ್ರ ಅನುಭವಕ್ಕಾಗಿ ಜಿಲ್ಲಾಮಟ್ಟದಲ್ಲಿ ತರಬೇತಿ ಹಾಗೂ ಚಲನಚಿತ್ರ ನಿರ್ದೇಶನ, ಛಾಯಾಗ್ರಹಣ, ವೀಡಿಯೋ ಸಂಕಲನ, ಸ್ಕ್ರಿಪ್ಟ್ ತಯಾರಿಕೆ ಇತ್ಯಾದಿಗಳ ಬಗ್ಗೆ ತರಬೇತಿ ನೀಡಲು ಕ್ರಮಜರುಗಿಸಲು ಮಾನ್ಯ ಸಮಾಜ ಕಲ್ಯಾಣ ಸಚಿವರು ತಿಳಿಸಿದರು.

2018-19 ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ)**

**13. ಪ್ರವಾಸೋದ್ಯಮ ಇಲಾಖೆ :-**

2018-19 ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ- ಎಸ್.ಸಿ.ಎಸ್.ಪಿ-ರೂ.15.36 ಕೋಟಿ, ಟಿ.ಎಸ್.ಪಿ- ರೂ.6.39 ಕೋಟಿ ಒಟ್ಟು ರೂ.21.75 ಕೋಟಿ.

ಈ ಕೆಳಕಂಡ ಕಾರ್ಯಕ್ರಮಗಳು ಮುಂದುವರೆದ ಕಾರ್ಯಕ್ರಮಗಳು

1) ಪ್ರವಾಸಿ ಟ್ಯಾಕ್ಸಿಗಳನ್ನು ಖರೀದಿಸಲು ರೂ.3.00 ಲಕ್ಷ ಸಹಾಯಧನ ನೀಡುವುದು.
2) ಪ.ಜಾತಿ / ಪ.ಪಂಗಡದ ವಿದ್ಯಾರ್ಥಿಗಳಿಗೆ ಕರ್ನಾಟಕ ದರ್ಶನ ಕಾರ್ಯಕ್ರಮ ಏರ್ಪಡಿಸುವುದು.

ಮಾನ್ಯ ಲೋಕೋಪಯೋಗಿ ಸಚಿವರು ಮಾತನಾಡಿ ಇಲಾಖೆಯಿಂದ ಮಂಜೂರು ಮಾಡುತ್ತಿರುವ ಪ್ರವಾಸಿ ಟ್ಯಾಕ್ಸಿಗಳನ್ನು ಫಲಾನುಭವಿಗಳು ಬೇರೆಯವರಿಗೆ ಮಾರಾಟ ಮಾಡಬಾರದೆಂದು ಷರತ್ತು ವಿಧಿಸಲು ಮತ್ತು ಅಂತವರ ವಿರುದ್ಧ ಕ್ರಮ ಜರುಗಿಸಲು ಸೂಚಿಸಿದರು. ಕೃಷಿ ಇಲಾಖೆಯಿಂದ ನೀಡಲಾಗುತ್ತಿರುವ ಉಪಕರಣಗಳ ಬಗ್ಗೆ ಸಹ ಇದೇ ರೀತಿ ಕ್ರಮ ವಹಿಸಲು ಸೂಚಿಸಿದರು.

ಕರ್ನಾಟಕ ದರ್ಶನ ಕಾರ್ಯಕ್ರಮದಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ವಿದ್ಯಾರ್ಥಿಗಳಿಗೂ ಸೇರಿಸಿಕೊಂಡು ಸೌಲಭ್ಯ ಒದಗಿಸುವುದು.

2018-19 ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪ್ರವಾಸೋದ್ಯಮ ಇಲಾಖೆ)**

**14. ಯುವ ಸಬಲೀಕರಣ ಮತ್ತು ಕ್ರೀಡಾಇಲಾಖೆ :-**

2018-19 ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ- ಎಸ್.ಸಿ.ಎಸ್.ಪಿ-ರೂ.19.83 ಕೋಟಿ, ಟಿ.ಎಸ್.ಪಿ- ರೂ.8.02 ಕೋಟಿ ಒಟ್ಟು ರೂ.27.85 ಕೋಟಿ.

ಈ ಕೆಳಕಂಡ ಕಾರ್ಯಕ್ರಮಗಳು ಮುಂದುವರೆದ ಕಾರ್ಯಕ್ರಮಗಳು

1) ಪ.ಜಾತಿ/ಪಂಗಡದ ಕ್ರೀಡಾಪಟುಗಳು ಸ್ವಯಂ ಉದ್ಯೋಗಹೊಂದಲು ಜಿಮ್ ಸ್ಥಾಪನೆಗೆ ಸಹಾಯಧನ.
2) ಕ್ರೀಡಾ ಪಟುಗಳಿಗೆ ಪ್ರೋತ್ಸಾಹಧನ.
3) ಹಿಮಾಲಯ ಮೌಂಟೆನೇರಿಂಗ್ ತರಬೇತಿ.
4) ಕ್ರೀಡಾ ಸಲಕರಣೆಗಳ ಸರಬರಾಜು.

ಮಾನ್ಯ ಸದಸ್ಯರಾದ ಶ್ರೀ. ಆರ್. ಧ್ರುವನಾರಾಯಣ ಇವರು ಮಾತನಾಡಿ ಹಿಂದಿನ ವರ್ಷ ಈ ಇಲಾಖೆಯಲ್ಲಿ ಶೇ.29 ರಷ್ಟು ಪ್ರಗತಿಯಾಗಿರುವುದಕ್ಕೆ ಕಾರಣವೇನೆಂದು ಕೇಳಿದರು. ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳು ಉತ್ತರ ನೀಡುತ್ತಾ, ಭೌತಿಕ ಪ್ರಗತಿ ಸಾಧಿಸಲಾಗಿದ್ದು, ಪ್ರಸ್ತುತ ಸಾಲಿನಲ್ಲಿ ಹಣ ಪಾವತಿ ಮಾಡಲಾಗುವುದು, ಈ ಕಾರಣಕ್ಕೆ ಆರ್ಥಿಕ ಪ್ರಗತಿ ಕುಂಠಿತವಾಗಿದೆ ಎಂದು ಸಭೆಯ ಗಮನಕ್ಕೆ ತಂದರು.

ಮಾನ್ಯ ಮುಖ್ಯ ಮಂತ್ರಿಗಳು ಕ್ರೀಡಾಂಗಣಕ್ಕೆ ಮತ್ತು ಜಿಮ್‌ಗಳನ್ನು ಸ್ಥಾಪಿಸಲು ಅನುದಾನ ನೀಡಲು ತಿಳಿಸಿದರು. ಈ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಸಚಿವರು ಸ್ಪೂರ್ತಿ ಯೋಜನೆಯಡಿಯಲ್ಲಿ ಈ ಸೌಲಭ್ಯಗಳನ್ನು ನೀಡಲಾಗುವುದೆಂದು ತಿಳಿಸಿದರು.

ಆಯಾ ತಾಲ್ಲೂಕುಗಳಲ್ಲಿ ಎಸ್.ಸಿ/ಎಸ್.ಟಿ ಜನಸಂಖ್ಯೆಯ ಆಧಾರದ ಮೇಲೆ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅನುದಾನವನ್ನು ಬಳಸಿಕೊಂಡು ಉಳಿದ ಅನುದಾನವನ್ನು ಇಲಾಖೆಯಿಂದ ಭರಿಸಿ ಕ್ರೀಡಾಂಗಣಗಳನ್ನು ನಿರ್ಮಾಣ ಮಾಡಲು ಕ್ರಮ ಜರುಗಿಸಬಹುದಾಗಿದೆ ಎಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು.

**ಪರಿಷತ್ತಿನ ನಿರ್ಧಾರ:-**

1) ವಿದ್ಯಾರ್ಥಿನಿಲಯಗಳು/ಎಮ್.ಡಿ.ಆರ್/ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳಿಗೆ Indoor & OutDoor ಆಟಗಳ ಕೋರ್ಟ್ ನಿರ್ಮಾಣ ಮಾಡುವುದು.

2018-19 ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ)**

**15. ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ :-**

2018-19 ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ- ಎಸ್.ಸಿ.ಎಸ್.ಪಿ-ರೂ.744.71 ಕೋಟಿ, ಟಿ.ಎಸ್.ಪಿ- ರೂ.423.61 ಕೋಟಿ ಒಟ್ಟು ರೂ.1168.32 ಕೋಟಿ.

(48)

ಈ ಕೆಳಕಂಡ ಕಾರ್ಯಕ್ರಮಗಳು ಮುಂದುವರೆದ ಕಾರ್ಯಕ್ರಮಗಳು

1) ಅನ್ನಭಾಗ್ಯ ಕಾರ್ಯಕ್ರಮದಲ್ಲಿ ಆಹಾರ ಧಾನ್ಯಗಳ ಸರಬರಾಜು.
2) ಅನಿಲ ಭಾಗ್ಯ ಸೌಲಭ್ಯ.

ಇಲಾಖೆಯಲ್ಲಿ ಎಸ್.ಸಿ.ಎಸ್.ಪಿ ಯಡಿಯಲ್ಲಿ ರೂ. 177.00 ಕೋಟಿ ಮತ್ತು ಟಿ.ಎಸ್.ಪಿ ಯಡಿಯಲ್ಲಿ ರೂ. 199.00 ಕೋಟಿ ಅನುದಾನವನ್ನು ಆದ್ಯರ್ಪಿಸುವುದು. ಇದನ್ನು ಇತರೇ ಕಾರ್ಯಕ್ರಮಗಳಿಗೆ ವಿನಿಯೋಗಿಸುವ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಸಚಿವರು ಪ್ರತ್ಯೇಕವಾಗಿ ಸಭೆ ನಡೆಸಿ ತೀರ್ಮಾನಿಸುವುದು.

ಅನ್ನಭಾಗ್ಯ ಮತ್ತು ಅನಿಲ ಭಾಗ್ಯ ಯೋಜನೆಯಡಿಯಲ್ಲಿ ಎಸ್.ಸಿ/ಎಸ್.ಟಿ ಫಲಾನುಭವಿಗಳು ಎಷ್ಟು ಎಂಬುದರ ಬಗ್ಗೆ ಅಂಕೆ-ಸಂಖ್ಯೆಗಳನ್ನು ಸಮಾಜ ಕಲ್ಯಾಣ ಇಲಾಖೆಗೆ ಒದಗಿಸಬೇಕೆಂದು ಮತ್ತೊಮ್ಮೆ ಮೇಲ್ಕಂಡ ಇಲಾಖೆಯನ್ನು ಕೋರಿದೆ.

ಸದರಿ ಇಲಾಖೆಯಲ್ಲಿ ಎಸ್.ಸಿ.ಎಸ್.ಪಿ ರಡಿಯಲ್ಲಿ ರೂ. 177.00 ಕೋಟಿ ಹಾಗೂ ಟಿ.ಎಸ್.ಪಿ ರಡಿ ರೂ. 199.00 ಕೋಟಿ ಉಳಿಕೆಯಾಗುತ್ತೆಯೆಂದು ತಿಳಿಸಿದ್ದು, ಸದರಿ ಮೊತ್ತಗಳನ್ನು ಆದ್ಯರ್ಪಣೆ ಮಾಡಲು ತೀರ್ಮಾನಿಸಲಾಯಿತು.

2018-19 ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ)**

**16. ಕಂದಾಯ ಇಲಾಖೆ :-**

2018-19 ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ- ಎಸ್.ಸಿ.ಎಸ್.ಪಿ-ರೂ.1149.98 ಕೋಟಿ, ಟಿ.ಎಸ್.ಪಿ- ರೂ.486.71 ಕೋಟಿ ಒಟ್ಟು ರೂ.1636.69 ಕೋಟಿ.

ಈ ಕೆಳಕಂಡ ಕಾರ್ಯಕ್ರಮಗಳು ಮುಂದುವರೆದ ಕಾರ್ಯಕ್ರಮಗಳು

1) ವಿಧವಾ ವೇತನ, ವೃದ್ಯಾಪ್ಯ ವೇತನ.
2) ಕುಟುಂಬದ ದುಡಿಯುವ ವ್ಯಕ್ತಿ ಮರಣಹೊಂದಿದಲ್ಲಿ ರೂ. 20000/- ಸಹಾಯಧನ ಮತ್ತು ಅಂತ್ಯ ಸಂಸ್ಕಾರಕ್ಕೆ ರೂ. 10000/- ಸಹಾಯಧನ.
3) ಆರಾಧನಾ ಯೋಜನೆಯಡಿಯಲ್ಲಿ ಪ.ಜಾತಿ / ಪ.ಪಂಗಡದವರು ವಾಸಿಸುತ್ತಿರುವ ಕಾಲೋನಿಗಳಲ್ಲಿ ಮಂದಿರಗಳ ದುರಸ್ಥಿ / ಜೀರ್ಣೋದ್ಧಾರ ಮಾಡುವುದು.

ಮಾನ್ಯ ಸದಸ್ಯರಾದ ಡಾ: ಕೆ. ಅನ್ನದಾನಿ ಇವರು ಮಾತನಾಡಿ ಆರಾಧನಾ ಯೋಜನೆಯಡಿಯಲ್ಲಿ ಎಸ್.ಸಿ/ಎಸ್.ಟಿ ಕಾಲೋನಿಗಳಲ್ಲಿ ಮಂದಿರಗಳ ದುರಸ್ತಿ ಮತ್ತು ಜೀರ್ಣೋದ್ಧಾರಕ್ಕಾಗಿ ಹೆಚ್ಚಿನ ಅನುದಾನ ನೀಡಬೇಕೆಂದು ಹೇಳಿದರು.

2018-19 ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ)**

17. **ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ** :-

2018-19 ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ- ಎಸ್.ಸಿ.ಎಸ್.ಪಿ-ರೂ.6.39 ಕೋಟಿ. ಟಿ.ಎಸ್.ಪಿ- ರೂ.2.55 ಕೋಟಿ ಒಟ್ಟು ರೂ.8.94 ಕೋಟಿ.

**ಪರಿಷತ್ತಿನ ನಿರ್ಧಾರ**:-

1) 2018-19ನೇ ಸಾಲಿನಲ್ಲಿ ನೀಡಿದ ಒಟ್ಟು ಅನುದಾನವನ್ನು ಐಡಿಯಾ ಟು ಪಿ.ಒ.ಸಿ. ಯೋಜನೆಯಡಿ ಸಾಮಾಜಿಕ ಕ್ಷೇತ್ರಗಳಲ್ಲಿ ಯಾವುದೇ ವ್ಯಕ್ತಿಗಳು ಮತ್ತು ಎಸ್.ಸಿ/ಎಸ್.ಟಿ ಜನರು ವಿವಿಧ ಕ್ಷೇತ್ರಗಳಲ್ಲಿ ಮಾಡುವ ಆವಿಷ್ಕರಣ ಯೋಜನೆ ಕಾರ್ಯಕ್ರಮಗಳಿಗೆ ರೂ. 50.00 ಲಕ್ಷಗಳವರೆಗೆ ಸಹಾಯಧನ ನೀಡುವುದು.

2018-19 ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ)**

18. **ವಸತಿ ಇಲಾಖೆ** :-

2018-19 ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ- ಎಸ್.ಸಿ.ಎಸ್.ಪಿ-ರೂ.1277.42 ಕೋಟಿ, ಟಿ.ಎಸ್.ಪಿ- ರೂ.439.36 ಕೋಟಿ ಒಟ್ಟು ರೂ.1716.78 ಕೋಟಿ.

ಈ ಕೆಳಕಂಡ ಕಾರ್ಯಕ್ರಮಗಳು ಮುಂದುವರೆದ ಕಾರ್ಯಕ್ರಮಗಳು

1) ಡಾ||ಬಿ.ಆರ್.ಅಂಬೇಡ್ಕರ್ ಯೋಜನೆ/ಇಂದಿರಾ ಆವಾಸ್ ಯೋಜನಾ/ ವಾಜಪೇಯಿ ನಗರ ವಸತಿ ಯೋಜನಾ/ಪ್ರಧಾನ್ ಮಂತ್ರಿ ಆವಾಸ್ ಯೋಜನೆಯಡಿಯಲ್ಲಿ ಮನೆಗಳ ನಿರ್ಮಾಣ.
2) ಕೊಳಚೆ ನಿರ್ಮೂಲನಾ ಅಭಿವೃದ್ಧಿ ಕಾರ್ಯಕ್ರಮಗಳು

ಮಾನ್ಯ ಸಮಾಜ ಕಲ್ಯಾಣ ಸಚಿವರು ವಸತಿ ಇಲಾಖೆಯವರು ಪ್ರಸ್ತುತ ಸಾಲಿನ ಅನುದಾನವನ್ನು ಕೂಡಲೇ ಬಿಡುಗಡೆ ಮಾಡುವಂತೆ ಪ್ರಸ್ತಾಪಿಸಿದ್ದು, ಆ ಬಗ್ಗೆ ಆರ್ಥಿಕ ಇಲಾಖೆಯ ಅಭಿಪ್ರಾಯ ತಿಳಿಸಲು ಸೂಚಿಸಿದ್ದು, ಆರ್ಥಿಕ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳು ರಾಜ್ಯ ಪರಿಷತ್ತಿನ ಅನುಮೋದನೆ ದೊರೆತ ನಂತರ ಬಿಡುಗಡೆ ಮಾಡಲಾಗುವುದು ಎಂದು ತಿಳಿಸಿದರು.

ಮಾನ್ಯ ಲೋಕೋಪಯೋಗಿ ಸಚಿವರು ಮಾತನಾಡಿ ಕೊಳಚೆ ಮಂಡಳಿ ವತಿಯಿಂದ ಮನೆ ನಿರ್ಮಾಣಕ್ಕಾಗಿ ಫಲಾನುಭವಿಗಳ ವಂತಿಕೆಯನ್ನು ಸರ್ಕಾರದಿಂದ ಭರಿಸುವ ಬಗ್ಗೆ ಪ್ರಸ್ತಾಪಿಸಿದರು.

ಮಾನ್ಯ ಸದಸ್ಯರುಗಳಾದ ಡಾ.ಕೆ.ಅನ್ನದಾನಿ ಮತ್ತು ಶ್ರೀ. ಆರ್. ಧ್ರುವನಾರಾಯಣ ರವರು ನಿವೇಶನ ರಹಿತ ಎಸ್.ಸಿ/ಎಸ್.ಟಿ ಜನರಿಗೆ ನಿವೇಶನ ಒದಗಿಸಬೇಕೆಂದು ಕೋರಿದರು.

ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಈಗಾಗಲೇ ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಿವೇಶನ ಒದಗಿಸುವ ಬಗ್ಗೆ ತಿಳಿಸಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು.

ಸಮಾಜ ಕಲ್ಯಾಣ ಇಲಾಖೆಯಿಂದ ಈಗಾಗಲೇ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ ನಿವೇಶನ ಖರೀದಿಗಾಗಿ ಹಣವನ್ನು ನೀಡಲಾಗಿದೆ ಎಂದು ಸಭೆಯ ಗಮನಕ್ಕೆ ತರಲಾಗಿದೆ. ಸದರಿ ನಿಗಮದವರು ತಕ್ಷಣವೇ ಕ್ರಮ ಜರುಗಿಸಿ ನಿವೇಶನ ಪಡೆದು ನಿವೇಶನ ರಹಿತರಿಗೆ ಹಂಚಿಕೆ ಮಾಡಲು ಕ್ರಮ ಜರುಗಿಸಬೇಕಾಗಿದೆ.

**ಪರಿಷತ್ತಿನ ನಿರ್ಧಾರ**:-

(46)

1) ವಸತಿ ಇಲಾಖೆಗೆ ನಿಗದಿ ಪಡಿಸಿದ ಸಂಪೂರ್ಣ ಅನುದಾನವನ್ನು ಒಂದೇ ಕಂತಿನಲ್ಲಿ ಬಿಡುಗಡೆ ಮಾಡುವುದು.

2018-19 ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಸತಿ ಇಲಾಖೆ)**

**19. ಉನ್ನತ ಶಿಕ್ಷಣ ಇಲಾಖೆ** :-

2018-19 ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ- ಎಸ್.ಸಿ.ಎಸ್.ಪಿ-ರೂ.84.15 ಕೋಟಿ, ಟಿ.ಎಸ್.ಪಿ- ರೂ.30.55 ಕೋಟಿ ಒಟ್ಟು ರೂ.114.70 ಕೋಟಿ.

ಈ ಕೆಳಕಂಡ ಕಾರ್ಯಕ್ರಮಗಳು ಮುಂದುವರೆದ ಕಾರ್ಯಕ್ರಮಗಳು

1) ವಿಶ್ವವಿದ್ಯಾನಿಲಯಗಳಲ್ಲಿ/ ಸರ್ಕಾರಿ ಕಾಲೇಜುಗಳಲ್ಲಿ/ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ/ ಪದವಿ / ಸ್ನಾತಕೋತ್ತರ ಪದವಿ / ಪಿ.ಹೆಚ್.ಡಿ ಕೋರ್ಸ್‌ಗಳನ್ನು ವ್ಯಾಸಂಗ ಮಾಡುತ್ತಿರುವ ಕುಟುಂಬದ ವಾರ್ಷಿಕ ಆದಾಯ ರೂ.5.00 ಲಕ್ಷದೊಳಗಿನ ಪ.ಜಾತಿ / ಪ.ಪಂಗಡ ವಿದ್ಯಾರ್ಥಿಗಳಿಗೆ ಲ್ಯಾಪ್‌ಟ್ಯಾಪ್‌ಗಳನ್ನು ಉಚಿತವಾಗಿ ನೀಡುವುದು.
2) ವಿಶ್ವವಿದ್ಯಾಲಯಗಳಲ್ಲಿ ಶೇ. 50 ಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಪ.ಜಾತಿ/ಪಂಗಡದ ವಿದ್ಯಾರ್ಥಿಗಳಿರುವ ವಸತಿ ನಿಲಯಗಳ ಉನ್ನತೀಕರಣ ಮತ್ತು ದುರಸ್ಥಿ.
3) ರೂ. 2.50 ಲಕ್ಷದಿಂದ ರೂ. 10.00 ಲಕ್ಷದೊಳಗೆ ವಾರ್ಷಿಕ ಆದಾಯ ಮಿತಿ ಇರುವ ಪ.ಜಾತಿ/ಪಂಗಡದ ವಿದ್ಯಾರ್ಥಿಗಳಿಗೆ ತಾಂತ್ರಿಕ ಶಿಕ್ಷಣ ಇಲಾಖೆಯಿಂದ ಶುಲ್ಕ ಮರುಪಾವತಿ.
4) ಭಾರತ ಸರ್ಕಾರದ ರಾಷ್ಟ್ರೀಯ ಉಚ್ಚತರ ಶಿಕ್ಷಾ ಅಭಿಯಾನ ರಡಿಯಲ್ಲಿ ನಿಗದಿಪಡಿಸಿದ ಕಾರ್ಯಕ್ರಮಗಳು.

ಮಾನ್ಯ ಲೋಕೋಪಯೋಗಿ ಸಚಿವರು ಇವರು ಮಾತನಾಡಿ ಈಗಾಗಲೇ 11 ಜಿಲ್ಲೆಗಳಲ್ಲಿ ಮಾಡಿದಂತೆ ಪ್ರತಿ ಜಿಲ್ಲೆಗಳಲ್ಲಿ ಒಂದು ಪದವಿ ವಸತಿ ಕಾಲೇಜು ಪ್ರಾರಂಭಿಸಲು ಮತ್ತು ಬಹಳಷ್ಟು ಕಾಲೇಜುಗಳಿಗೆ ಸ್ವಂತ ಕಟ್ಟಡಗಳನ್ನು ಮಂಜೂರು ಮಾಡಬೇಕೆಂದು ಒತ್ತಾಯಿಸಿದರು.

ಮಾನ್ಯ ಉನ್ನತ ಶಿಕ್ಷಣ ಸಚಿವರು ಮಾತನಾಡಿ ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್‌ಗೆ ಅನುದಾನ ಒದಗಿಸುವಂತೆ ಕೋರಿದರು. ಮುಂದುವರೆದು ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳನ್ನು ಇಂಜಿನಿಯರಿಂಗ್, ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶ ಶುಲ್ಕ ಕಟ್ಟಬೇಕೆಂದು ಕೆಲವು ಕಾಲೇಜುಗಳಲ್ಲಿ ಒತ್ತಾಯ ಮಾಡುತ್ತಿದ್ದು, ಇದರಿಂದ ಬಡ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಕಾರಣ ಸರ್ಕಾರದಿಂದ ಈ ಬಗ್ಗೆ ಸೂಕ್ತ ನಿರ್ದೇಶನ ನೀಡಲು ತಿಳಿಸಿದರು.

ಸರ್ಕಾರಿ ಕಾಲೇಜುಗಳಲ್ಲಿ ಪ್ರವೇಶಕ್ಕೆ ಯಾವುದೇ ಸಮಸ್ಯೆಯಿರುವುದಿಲ್ಲ. ಸಿ.ಇ.ಟಿ ಮುಖಾಂತರ ಪ್ರವೇಶ ಪಡೆಯುವವರಿಗೆ ಪ್ರವೇಶ ಶುಲ್ಕವನ್ನು ತೆಗೆದುಕೊಳ್ಳದೇ ಪ್ರವೇಶ ನೀಡಬೇಕೆಂದು ಈಗಾಗಲೇ ಸರ್ಕಾರದಿಂದ ಆದೇಶ ನೀಡಲಾಗಿದೆ ಎಂದು ಸಭೆಯ ಗಮನಕ್ಕೆ ತರಲಾಯಿತು. ಸಮಾಜ ಕಲ್ಯಾಣ ಇಲಾಖೆಯಿಂದ, ವೈದ್ಯಕೀಯ ಶಿಕ್ಷಣ ಇಲಾಖೆಯಿಂದ ಹಾಗೂ ತಾಂತ್ರಿಕ ಶಿಕ್ಷಣ ಇಲಾಖೆಯಿಂದ ಪ್ರವೇಶ ಶುಲ್ಕವನ್ನು ಕಾಲೇಜುಗಳಿಗೆ ಮರು ಪಾವತಿ ಮಾಡಲಾಗುತ್ತಿದೆ.

2018-19 ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ)**

**20. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ :-**

2018-19 ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ- ಎಸ್.ಸಿ.ಎಸ್.ಪಿ-ರೂ.645.76 ಕೋಟಿ, ಟಿ.ಎಸ್.ಪಿ- ರೂ.260.57 ಕೋಟಿ ಒಟ್ಟು ರೂ.906.33 ಕೋಟಿ.

ಈ ಕೆಳಕಂಡ ಕಾರ್ಯಕ್ರಮಗಳು ಮುಂದುವರೆದ ಕಾರ್ಯಕ್ರಮಗಳು

1) ವಿದ್ಯಾವಿಕಾಸ ಯೋಜನೆಯಡಿಯಲ್ಲಿ ಪಠ್ಯ ಪುಸ್ತಕ, ಸಮವಸ್ತ್ರ, ಬೈಸಿಕಲ್ ವಿತರಣೆ.
2) ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು.
3) ಮಧ್ಯಾಹ್ನದ ಬಿಸಿಯೂಟ, ಕ್ಷೀರಭಾಗ್ಯ ಕಾರ್ಯಕ್ರಮ ಅನುಷ್ಠಾನಗೊಳಿಸುವುದು.
4) ಆರ್.ಟಿ.ಇ. ಯೋಜನೆಯಡಿ ಶುಲ್ಕ ಮರುಪಾವತಿ.
5) ಪ.ಜಾತಿ/ಪಂಗಡದ ಕಾಲೋನಿಗಳಲ್ಲಿ ಗ್ರಂಥಾಲಯ ಅಭಿವೃದ್ಧಿ.
6) ಮೀಸಲು ಕ್ಷೇತ್ರಗಳಲ್ಲಿ ಪ್ರಾಥಮಿಕ ಶಾಲೆಗಳ ಅಭಿವೃದ್ಧಿ.

ಮಾನ್ಯ ಲೋಕೋಪಯೋಗಿ ಸಚಿವರು ಇವರು ಮಾತನಾಡಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ಬಹಳಷ್ಟು ಬೇಡಿಕೆಯಿದ್ದು ಹಾಗೂ ಫಲಿತಾಂಶವು ಸಹ ಉತ್ತಮವಾಗಿದ್ದು, ಸದರಿ ವಸತಿ ಶಾಲೆಗಳ ಸಂಕೀರ್ಣಗಳನ್ನು ನಿರ್ಮಾಣ ಮಾಡಲು ಅನುದಾನ ಒದಗಿಸಲು ಮತ್ತು ಈ ಶಾಲೆಗಳಲ್ಲಿ 11 ಮತ್ತು 12ನೇ ತರಗತಿಗಳನ್ನು ಪ್ರಾರಂಭಿಸಲು ಸಲಹೆ ನೀಡಿದರು.

ಮಾನ್ಯ ಸದಸ್ಯರಾದ ಶ್ರೀ. ಆರ್ ಧ್ರುವನಾರಾಯಣ ರವರು ಮಾತನಾಡಿ ಎಲ್ಲಾ ಹೋಬಳಿಗಳಲ್ಲಿ ವಸತಿ ಶಾಲೆ ಪ್ರಾರಂಭಿಸುವ ಬಗ್ಗೆ ಮಾಡಿದ ಘೋಷಣೆಯನ್ನು ಪೂರೈಸಲಾಗಿದೆಯೇ ಎಂಬ ಬಗ್ಗೆ ಮಾಹಿತಿ ನೀಡಲು ಕೋರಿದರು.

ಈಗಾಗಲೇ ರಾಜ್ಯದ ಎಲ್ಲಾ ಹೋಬಳಿಗಳಲ್ಲಿ ಎಸ್.ಸಿ/ಎಸ್.ಟಿ/ಬಿ.ಸಿ ಮತ್ತು ಅಲ್ಪಸಂಖ್ಯಾತ ಇಲಾಖೆಗಳಿಂದ ವಸತಿ ಶಾಲೆಗಳನ್ನು ತೆರೆಯಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು.

2018-19 ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ)**

**21. ಕೈಮಗ್ಗ ಮತ್ತು ಜವಳಿ ಇಲಾಖೆ :-**

2018-19 ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ- ಎಸ್.ಸಿ.ಎಸ್.ಪಿ-ರೂ.34.32 ಕೋಟಿ, ಟಿ.ಎಸ್.ಪಿ- ರೂ.14.02 ಕೋಟಿ ಒಟ್ಟು ರೂ.48.34 ಕೋಟಿ.

ಈ ಕೆಳಕಂಡ ಕಾರ್ಯಕ್ರಮಗಳು ಮುಂದುವರೆದ ಕಾರ್ಯಕ್ರಮಗಳು

1) ಪ.ಜಾತಿ/ಪಂಗಡದ ಕುಶಲಕರ್ಮಿಗಳಿಗೆ ವಸತಿ ಹಾಗೂ ಕಾರ್ಯಾಗಾರ ನಿರ್ಮಾಣ.
2) ಪ.ಜಾತಿ/ಪಂಗಡದ ನೇಕಾರರಿಗೆ ವಿದ್ಯುತ್ ಚಾಲಿತ ಮಗ್ಗಗಳನ್ನು ಖರೀದಿಸಲು ಸಹಾಯಧನ.
3) ಸಿದ್ಧ ಉಡುಪು ತಯಾರಿಸುವ ಘಟಕಗಳಿಗೆ ಗಾರ್ಮೆಂಟ್ ಪಾಲಿಸಿಯಂತೆ ಸಹಾಯಧನ ನೀಡುವುದು.
4) ಪ.ಜಾತಿ / ಪ.ಪಂಗಡ ವಸತಿ ನಿಲಯ / ವಸತಿ ಶಾಲೆಗಳಲ್ಲಿರುವ ವಿದ್ಯಾರ್ಥಿಗಳಿಗೆ ಜಮಖಾನ / ಹಾಸಿಗೆ / ಬೆಡ್‌ಶೀಟ್‌ಗಳನ್ನು ಸರಬರಾಜು ಮಾಡುವುದು.

**22. ಭಾರೀ ಮತ್ತು ಮಧ್ಯಮ ಕೈಗಾರಿಕಾ ಇಲಾಖೆ :-**

2018-19 ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ- ಎಸ್.ಸಿ.ಎಸ್.ಪಿ-ರೂ.62.33 ಕೋಟಿ, ಟಿ.ಎಸ್.ಪಿ- ರೂ.25.03 ಕೋಟಿ ಒಟ್ಟು ರೂ.87.36 ಕೋಟಿ.

ಈ ಕೆಳಕಂಡ ಕಾರ್ಯಕ್ರಮಗಳು ಮುಂದುವರೆದ ಕಾರ್ಯಕ್ರಮಗಳು

1) ಪ.ಜಾತಿ/ಪ.ಪಂಗಡದ ಕುಶಲಕರ್ಮಿಗಳಿಗೆ-ವಸತಿ ಮತ್ತು ಕಾರ್ಯಗಾರ ನಿರ್ಮಾಣ
2) ಸಾಫ್ಟ್ ಸೀಡ್ ಕ್ಯಾಪಿಟಲ್ ಯೋಜನೆಯಡಿಯಲ್ಲಿ ಸೂಕ್ಷ್ಮ/ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯುವಲ್ಲಿ ಫಲಾನುಭವಿಗಳು ಮಾರ್ಜಿನ್ ಮನಿ ಭರಿಸಬೇಕಾದಲ್ಲಿ ಶೇ.50 ರಷ್ಟು ಮೊತ್ತವನ್ನು ಸಾಲ ರೂಪದಲ್ಲಿ ಶೂನ್ಯ ಬಡ್ಡಿ ದರದಲ್ಲಿ ನೀಡುವುದು.
3) ಕೆ.ಐ.ಎ.ಡಿ.ಬಿ ಮತ್ತು ಕೆ.ಎಸ್.ಎಸ್.ಐ.ಡಿ.ಸಿ ವತಿಯಿಂದ ಕೈಗಾರಿಕಾ ನಿವೇಶನ ಮತ್ತು ಶೆಡ್‌ಗಳಿಗೆ ಶೇ.50 ರಷ್ಟು ಸಹಾಯಧನ
4) ಪ.ಜಾತಿ / ಪ.ಪಂಗಡ ಉದ್ದಿಮೆದಾರರು ಹೊಸದಾಗಿ ಸ್ಥಾಪಿಸುವ ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕಾ ಘಟಕಗಳಿಗೆ 5 ವರ್ಷ ಅವಧಿಗೆ ವಿದ್ಯುತ್ ಸರಬರಾಜಿನಲ್ಲಿ ಒಂದು ಯುನಿಟ್‌ಗೆ ರೂ.2.00 ರಂತೆ ಸಹಾಯಧನ
5) ಪ.ಜಾತಿ / ಪ.ಪಂಗಡ ಉದ್ದಿಮೆದಾರರು ಹೊಸದಾಗಿ ಸ್ಥಾಪಿಸುವ ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕಾ ಘಟಕಗಳಿಗೆ ಹಣಕಾಸು ಸಂಸ್ಥೆಗಳು ವಿಧಿಸುವ ವಿವಿಧ ಶುಲ್ಕಗಳನ್ನು ಸರ್ಕಾರದಿಂದ ಭರಿಸುವುದು.

**23. ಸಣ್ಣ ಕೈಗಾರಿಕೆ ಇಲಾಖೆ :-**

2018-19 ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ- ಎಸ್.ಸಿ.ಎಸ್.ಪಿ-ರೂ.67.84 ಕೋಟಿ, ಟಿ.ಎಸ್.ಪಿ- ರೂ.21.26 ಕೋಟಿ ಒಟ್ಟು ರೂ.89.10 ಕೋಟಿ.

ಈ ಕೆಳಕಂಡ ಕಾರ್ಯಕ್ರಮಗಳು ಮುಂದುವರೆದ ಕಾರ್ಯಕ್ರಮಗಳು

1) ಜಿಲ್ಲಾ ಕೈಗಾರಿಕಾ ಕೇಂದ್ರಗಳ ಮುಖಾಂತರ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ ನೆರವು
2) ಔದ್ಯಮಿಕ ಸಮೂಹಗಳ ಅಭಿವೃದ್ಧಿ
3) ಪ.ಜಾತಿ / ಪ.ಪಂಗಡ ಉದ್ದಿಮೆದಾರರು ಹೊಸದಾಗಿ ಸ್ಥಾಪಿಸುವ ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕಾ ಘಟಕಗಳಿಗೆ 5 ವರ್ಷ ಅವಧಿಗೆ ವಿದ್ಯುತ್ ಸರಬರಾಜಿನಲ್ಲಿ ಒಂದು ಯುನಿಟ್‌ಗೆ ರೂ.2.00 ರಂತೆ ಸಹಾಯಧನ
4) ಪ.ಜಾತಿ / ಪ.ಪಂಗಡ ಉದ್ದಿಮೆದಾರರು ಹೊಸದಾಗಿ ಸ್ಥಾಪಿಸುವ ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕಾ ಘಟಕಗಳಿಗೆ ಹಣಕಾಸು ಸಂಸ್ಥೆಗಳು ವಿಧಿಸುವ ವಿವಿಧ ಶುಲ್ಕಗಳನ್ನು ಸರ್ಕಾರದಿಂದ ಭರಿಸುವುದು.

ಮಾನ್ಯ ಸದಸ್ಯರಾದ ಡಾ: ಕೆ. ಅನ್ನದಾನಿ, ಶ್ರೀ. ಹೆಚ್.ಕೆ. ಕುಮಾರಸ್ವಾಮಿ ಮತ್ತು ಶ್ರೀ. ಆರ್. ಧ್ರುವನಾರಾಯಣ ರವರು ಮಾತನಾಡಿ ಕೆ.ಐ.ಎ.ಡಿ.ಬಿ ವತಿಯಿಂದ ಕೈಗಾರಿಕಾ ನಿವೇಶನಗಳನ್ನು ಪರಿಶಿಷ್ಟ ಜಾತಿ/ಪಂಗಡದವರಿಗೆ ಶೇ.75 ರ ಸಹಾಯಧನದಲ್ಲಿ ಹಂಚಿಕೆ ಮಾಡಬೇಕೆಂದು ಒತ್ತಾಯಿಸಿದರು.

2018-19 ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ)**

**24. ನಗರಾಭಿವೃದ್ಧಿ ಇಲಾಖೆ :-**

2018-19 ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ- ಎಸ್.ಸಿ.ಎಸ್.ಪಿ-ರೂ.880.21 ಕೋಟಿ, ಟಿ.ಎಸ್.ಪಿ- ರೂ.367.81 ಕೋಟಿ ಒಟ್ಟು ರೂ.1248.10 ಕೋಟಿ.

ಈ ಕೆಳಕಂಡ ಕಾರ್ಯಕ್ರಮಗಳು ಮುಂದುವರೆದ ಕಾರ್ಯಕ್ರಮಗಳು

1) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ವತಿಯಿಂದ ಕುಡಿಯುವ ನೀರಿನ ಸರಬರಾಜು ಕಾರ್ಯಕ್ರಮ.
2) ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ವತಿಯಿಂದ ಕುಡಿಯುವ ನೀರಿನ ಸರಬರಾಜು ಕಾರ್ಯಕ್ರಮ.
3) ನಗರ ಪ್ರದೇಶದಲ್ಲಿ ಪ.ಜಾತಿ/ಪಂಗಡದವರಿಗೆ ವೈಯಕ್ತಿಕ/ಸಮುದಾಯ ಶೌಚಾಲಯಗಳ ನಿರ್ಮಾಣ.
4) ವಿವಿಧ ಪಟ್ಟಣ/ನಗರ ಪ್ರದೇಶಗಳಲ್ಲಿ ಪ.ಜಾತಿ/ಪಂಗಡ ಜನರು ಹೆಚ್ಚಾಗಿ ವಾಸಿಸುವ ಪ್ರದೇಶಗಳಲ್ಲಿ ರಸ್ತೆ, ಚರಂಡಿ ಮತ್ತು ಇತರೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು.
5) ನಗರೋತ್ಥಾನ ಯೋಜನೆಯಡಿಯಲ್ಲಿ ಪ.ಜಾತಿ/ಪಂಗಡ ಜನರು ಹೆಚ್ಚಾಗಿ ವಾಸಿಸುವ ಪ್ರದೇಶಗಳಲ್ಲಿ ರಸ್ತೆ, ಚರಂಡಿ ಮತ್ತು ಇತರೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು.
6) ಖಾಯಂ ಪೌರಕಾರ್ಮಿಕರ ವಸತಿ ಯೋಜನೆ (ರೂ. 6.00 ಲಕ್ಷ ಸಹಾಯಧನ)
7) ಕೊಳಗೇರಿ ಪ್ರದೇಶದಲ್ಲಿ ವಾಸಿಸುತ್ತಿರುವ ಪ.ಜಾತಿ/ಪಂಗಡದವರಿಗೆ ರಾಜೀವ್ ಆವಾಸ್ ಯೋಜನೆಯಡಿ ವಸತಿ ನಿರ್ಮಾಣ.

ಮಾನ್ಯ ಸಮಾಜ ಕಲ್ಯಾಣ ಸಚಿವರು ಮಾತನಾಡಿ ನಗರ ಪ್ರದೇಶಗಳಲ್ಲಿ ಪ್ರಗತಿ ಕಾಲೋನಿ ಯೋಜನೆಯಡಿಯಲ್ಲಿ ಎಸ್.ಸಿ/ಎಸ್.ಟಿ ವಾಸಿಸುತ್ತಿರುವ ಪ್ರದೇಶಗಳಿಗೆ ಹೆಚ್ಚಿನ ಅನುದಾನ ನೀಡಿ ಅಭಿವೃದ್ಧಿ ಪಡಿಸಲು ಸೂಚಿಸಿದರು. ಈ ಇಲಾಖೆಯಲ್ಲಿ ನಗರೋತ್ಥಾನ ಯೋಜನೆಯಡಿ ಡೀಮ್ಡ್ ವೆಚ್ಚ ಆಗುತ್ತಿರುವುದರಿಂದ ಈ ಅನುದಾನವನ್ನು ಕಾಲೋನಿಗಳ ಅಭಿವೃದ್ಧಿಗೆ ಉಪಯೋಗಿಸುವುದು.

ಕಾರ್ಯದರ್ಶಿಯವರು, ನಗರೋತ್ಥಾನ ಯೋಜನೆಯಡಿ ಈಗಾಗಲೇ ಕ್ರಿಯಾ ಯೋಜನೆ ಅನುಮೋದಿಸಿದ್ದು, ಮುಂದುವರೆದ ಕಾಮಗಾರಿಗಳು ಇರುವುದರಿಂದ ಈ ಹಂತದಲ್ಲಿ ಪ್ರಗತಿ ಕಾಲೋನಿ ಕಾರ್ಯಕ್ರಮಕ್ಕೆ ಮಾರ್ಪಡಿಸಲು ಕಷ್ಟಕರವಾಗುತ್ತದೆ ಎಂದು ತಿಳಿಸಿ ನಿಗದಿಪಡಿಸಿದ ಅನುದಾನವನ್ನು ಡೀಮ್ಡ್ ವೆಚ್ಚವೆಂದು ಪರಿಗಣಿಸಲು ಕೋರಿದರು. ಅದೇ ರೀತಿ ಇ.ಎ.ಪಿ ಯೋಜನೆಗಳಲ್ಲಿ ಸಹ ಡೀಮ್ಡ್ ವೆಚ್ಚ ಆಗುತ್ತದೆ ಎಂದು ತಿಳಿಸಿದರು.

ಮಾನ್ಯ ಸದಸ್ಯರಾದ ಡಾ: ಕೆ.ಅನ್ನದಾನಿ ರವರು ಮಾತನಾಡಿ ಪೌರಕಾರ್ಮಿಕರಿಗೆ ಮನೆಗಳನ್ನು ನಿರ್ಮಿಸಿಕೊಳ್ಳಲು ಸಹಾಯಧನ ಒದಗಿಸಿಬೇಕೆಂದು ತಿಳಿಸಿದರು. ಖಾಯಂ ಪೌರ ಕಾರ್ಮಿಕರಿಗೆ ಮನೆಗಳ ನಿರ್ಮಾಣಕ್ಕಾಗಿ ರೂ. 6.00 ಲಕ್ಷ ಸಹಾಯಧನ ನೀಡಲಾಗುತ್ತದೆ ಎಂದು ಸಭೆಯ ಗಮನಕ್ಕೆ ತಂದರು.

ಮಾನ್ಯ ಸಮಾಜ ಕಲ್ಯಾಣ ಸಚಿವರು ಮಾತನಾಡಿ ನಗರಾಭಿವೃದ್ಧಿ ಇಲಾಖೆ ಅನುಷ್ಠಾನ ಮಾಡುತ್ತಿರುವ ಯೋಜನೆಗಳ ಬಗ್ಗೆ ವಿವರಗಳನ್ನು ಪಡೆದು ಮತ್ತೊಮ್ಮೆ ಪರಿಶೀಲಿಸಿ ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳಲಾಗುವುದೆಂದು ತಿಳಿಸಿದರು.

2018-19 ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ)**

**25. ಲೋಕೋಪಯೋಗಿ ಇಲಾಖೆ :-**

2018-19 ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ- ಎಸ್.ಸಿ.ಎಸ್.ಪಿ-ರೂ.983.93 ಕೋಟಿ, ಟಿ.ಎಸ್.ಪಿ- ರೂ.462.65 ಕೋಟಿ ಒಟ್ಟು ರೂ.1446.58 ಕೋಟಿ.

ಈ ಕೆಳಕಂಡ ಕಾರ್ಯಕ್ರಮಗಳು ಮುಂದುವರೆದ ಕಾರ್ಯಕ್ರಮಗಳು

1) ಪ.ಜಾತಿ/ಪಂಗಡದವರು ಹೆಚ್ಚಾಗಿ ವಾಸಿಸುತ್ತಿರುವ ಕಾಲೋನಿಗಳಿಗೆ ಮೂಲಭೂತ ಸೌಕರ್ಯಗಳನ್ನು (ಸಿ.ಸಿ. ರಸ್ತೆ, ಸಂಪರ್ಕ ರಸ್ತೆ ಮತ್ತು ಚರಂಡಿ) ಕಲ್ಪಿಸುವುದು.

ಮಾನ್ಯ ಲೋಕೋಪಯೋಗಿ ಸಚಿವರು ತಮ್ಮ ಇಲಾಖೆಗೆ ಎಲಿವೇಟೆಡ್ ಕಾರಿಡಾರ್‌ಗೆ ನೀಡಿದ ರೂ.250.00 ಕೋಟಿಗಳನ್ನು ಕಾಲೋನಿಗಳ ಅಭಿವೃದ್ಧಿಗಾಗಿ ಮರು ಹಂಚಿಕೆ ಮಾಡಿ ನೀಡಲು ಒತ್ತಾಯಿಸಿದರು. ಇದಲ್ಲದೇ ಹೆಚ್ಚುವರಿಯಾಗಿ ರೂ.250.00 ಕೋಟಿಗಳನ್ನು ಕಾಲೋನಿಗಳ ಅಭಿವೃದ್ಧಿಗೆ ನೀಡಲು ಕೋರಿದರು.

**ಪರಿಷತ್ತಿನ ನಿರ್ಧಾರ:-**

1) ಕೆ.ಆರ್.ಡಿ.ಸಿ.ಎಲ್ ನಿಂದ ಬೆಂಗಳೂರು ಮಹಾನಗರದಲ್ಲಿ ಎಲಿವೆಟೆಡ್ ರೋಡ್ ನಿರ್ಮಾಣಕ್ಕೆ ಒಟ್ಟು ರೂ. 250.00 ಕೋಟಿ ಅನುದಾನ ನೀಡಿದ್ದು, ಡೀಮ್ಡ್ ವೆಚ್ಚ ಆಗಿರುವುದರಿಂದ ಈ ಮೊತ್ತವನ್ನು ಸದರಿ ಇಲಾಖೆಯಿಂದ ಪ್ರಗತಿ ಕಾಲೋನಿ ಅಭಿವೃದ್ಧಿಗಾಗಿ ಉಪಯೋಗಿಸಲು ಅನುಮೋದನೆ ನೀಡಲಾಯಿತು.
2) 2018-19ನೇ ಸಾಲಿನ ಪ್ರಗತಿ ಕಾಲೋನಿ ಯೋಜನೆಯಡಿ ಸಮಾಜ ಕಲ್ಯಾಣ ಇಲಾಖೆಯಿಂದ ಆಯ್ಕೆಯಾದ ಪ.ಜಾತಿ/ಪಂಗಡದವರು ಹೆಚ್ಚಾಗಿ ವಾಸಿಸುತ್ತಿರುವ ಕಾಲೋನಿಗಳಿಗೆ ಮೂಲಭೂತ ಸೌಕರ್ಯಗಳನ್ನು (ಸಿ.ಸಿ. ರಸ್ತೆ, ಸಂಪರ್ಕ ರಸ್ತೆ ಮತ್ತು ಚರಂಡಿ) ಕಲ್ಪಿಸುವುದು. ಪ್ರಗತಿ ಕಾಲೋನಿ ಪಟ್ಟಿಯನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಒದಗಿಸಲಾಗುವುದು.

2018-19 ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ)**

**26. ಭಾರೀ ನೀರಾವರಿ ಇಲಾಖೆ :-**

2018-19 ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ- ಎಸ್.ಸಿ.ಎಸ್.ಪಿ-ರೂ.1669.11 ಕೋಟಿ, ಟಿ.ಎಸ್.ಪಿ- ರೂ.856.26 ಕೋಟಿ ಒಟ್ಟು ರೂ.2525.37 ಕೋಟಿ.

ಈ ಕೆಳಕಂಡ ಕಾರ್ಯಕ್ರಮಗಳು ಮುಂದುವರೆದ ಕಾರ್ಯಕ್ರಮಗಳು

1) ಒಟ್ಟು ಅನುದಾನದಲ್ಲಿ ಶೇಕಡ 50 ರಷ್ಟು ಅನುದಾನವನ್ನು ಬೃಹತ್ ನೀರಾವರಿ ಯೋಜನೆಗಳಿಗೆ ಪ.ಜಾತಿ/ಪಂಗಡದ ರೈತರು ಹೊಂದಿರುವ ಜಮೀನಿನ ಅನುಪಾತದ ಅನುಗುಣವಾಗಿ ಉಪಯೋಗಿಸಲು.
2) ಉಳಿದ ಅನುದಾನವನ್ನು ಪ.ಜಾತಿ/ಪಂಗಡದ ರೈತರಿಗೆ ವೈಯಕ್ತಿಕ/ಸಾಮೂಹಿಕ ನೀರಾವರಿ ಕಾಮಗಾರಿಗಳಿಗೆ ಉಪಯೋಗಿಸಲು.

ಭಾರಿ ನೀರಾವರಿ ಇಲಾಖೆಯಿಂದ ಈಗಾಗಲೇ ಮಂಜೂರು ಮಾಡಿದ ಸಮುದಾಯ ಭವನಗಳನ್ನು ಪೂರ್ಣಗೊಳಿಸಲು ಶ್ರೀ. ಆರ್. ಧ್ರುವನಾರಾಯಣ ಇವರು ತಿಳಿಸಿದರು. ತಾಲ್ಲೂಕಿಗೆ ಒಂದು ಭವನವನ್ನು ಮಂಜೂರು ಮಾಡಲು ಡಾ: ಕೆ.ಅನ್ನದಾನಿ ಇವರು ಕೋರಿದರು.

ಮಾನ್ಯ ಲೋಕೋಪಯೋಗಿ ಸಚಿವರು ಮಾತನಾಡಿ ವಸತಿ ಶಾಲೆಗಳ ಕಟ್ಟಡ ನಿರ್ಮಾಣಕ್ಕೆ ರೂ.500.00 ಕೋಟಿಗಳನ್ನು ಭಾರಿ ನೀರಾವರಿ ಇಲಾಖೆಯಿಂದ ಉಳಿಕೆಯಾಗುವ ಅನುದಾನದಿಂದ ಮರು ಹಂಚಿಕೆ ಮಾಡಲು ತಿಳಿಸಿದರು.

**ಪರಿಷತ್ತಿನ ನಿರ್ಧಾರ:-**

1. 2018-19ನೇ ಸಾಲಿನಲ್ಲಿ ವೈಯಕ್ತಿಕ ಕೊಳವೆಬಾವಿಗಳನ್ನು ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ನೀಡಲಾಗುತ್ತಿರುವುದರಿಂದ ಮತ್ತು ನೀರಾವರಿ ಇಲಾಖೆಗಳಿಂದ ಕೊಳವೆ ಬಾವಿಗಳನ್ನು ತೆಗೆದಿದ್ದಲ್ಲಿ ವಿದ್ಯುತ್ ಸಂಪರ್ಕಕ್ಕೆ ಅನುದಾನ ಹೆಚ್ಚು ವೆಚ್ಚವಾಗುತ್ತಿರುವುದರಿಂದ ಕೊಳವೆ ಬಾವಿಗಳನ್ನು ನೀರಾವರಿ ಇಲಾಖೆಯಿಂದ ತೆಗೆದುಕೊಳ್ಳುವ ಅವಶ್ಯಕತೆ ಇಲ್ಲ.

2) ಪ.ಜಾತಿ/ಪಂಗಡದ ವಸತಿ ಶಾಲೆ/ವಸತಿ ನಿಲಯಗಳ ಸಂಕೀರ್ಣಗಳನ್ನು ನಿರ್ಮಿಸಲು ಮೇಲ್ಕಂಡ ಅನುದಾನವನ್ನು ಉಪಯೋಗಿಸಲು. ನಿವೇಶನ ಮಾಹಿತಿ ಮತ್ತು ನಕ್ಷೆಗಳನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಒದಗಿಸಲಾಗುವುದು. ಇದಕ್ಕೆ ರೂ. 500.00 ಕೋಟಿ ಅನುದಾನವನ್ನು ಮೇಲ್ಕಂಡ ಕಾರ್ಯಕ್ರಮಗಳಿಗೆ ಕ್ರೈಸ್ ಸಂಸ್ಥೆಗೆ ನೀಡಲು ತೀರ್ಮಾನಿಸಲಾಯಿತು.
3) ನೀರಾವರಿಯೇತರ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಸಚಿವರು ಸಭೆ ನಡೆಸಿ ತೀರ್ಮಾನಿಸುವುದು.

2018-19 ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಭಾರೀ ನೀರಾವರಿ ಇಲಾಖೆ)**

**27. ಸಣ್ಣ ನೀರಾವರಿ ಇಲಾಖೆ :-**

2018-19 ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ- ಎಸ್.ಸಿ.ಎಸ್.ಪಿ-ರೂ.325.11 ಕೋಟಿ, ಟಿ.ಎಸ್.ಪಿ- ರೂ.133.61 ಕೋಟಿ ಒಟ್ಟು ರೂ.458.72 ಕೋಟಿ.

ಈ ಕೆಳಕಂಡ ಕಾರ್ಯಕ್ರಮಗಳು ಮುಂದುವರೆದ ಕಾರ್ಯಕ್ರಮಗಳು

1) ಪ.ಜಾತಿ/ಪ.ಪಂಗಡದ ರೈತರ ಜಮೀನುಗಳಲ್ಲಿ ವೈಯಕ್ತಿಕ/ಸಾಮೂಹಿಕ ನೀರಾವರಿ ಮೇಲುಜಲ ಲಭ್ಯವಿರುವ ಕಡೆ ಏತ ನೀರಾವರಿ ಸೌಲಭ್ಯ ಒದಗಿಸುವುದು.
2) ಕೆರೆ ಅಚ್ಚುಕಟ್ಟಿನಲ್ಲಿ ಪ.ಜಾತಿ/ಪ.ಪಂಗಡದವರ ಒಟ್ಟು ಜಮೀನಿನಲ್ಲಿ ಶೇ.75 ರಷ್ಟು ಇದ್ದಲ್ಲಿ ಮುಖ್ಯವಾಗಿ ಮೀಸಲು ಕ್ಷೇತ್ರಗಳಲ್ಲಿ ಕೆರೆಗಳ ಅಭಿವೃದ್ಧಿ
3) ಪ.ಜಾತಿ/ಪ.ಪಂಗಡದ ರೈತರ ಜಮೀನುಗಳಲ್ಲಿ ಅಥವಾ ಪಕ್ಕದಲ್ಲಿ ಮಳೆ ನೀರು ಸಂಗ್ರಹಣೆಗಾಗಿ ಚೆಕ್‌ಡ್ಯಾಂಗಳನ್ನು ನಿರ್ಮಿಸುವುದು.

**ಪರಿಷತ್ತಿನ ನಿರ್ಧಾರ:-**

1) 2018-19ನೇ ಸಾಲಿನಲ್ಲಿ ವೈಯಕ್ತಿಕ ಕೊಳವೆಬಾವಿಗಳನ್ನು ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ನೀಡಲಾಗುತ್ತಿರುವುದರಿಂದ ಮತ್ತು ನೀರಾವರಿ ಇಲಾಖೆಗಳಿಂದ ಕೊಳವೆ ಬಾವಿಗಳನ್ನು ತೆಗೆದಿದ್ದಲ್ಲಿ ವಿದ್ಯುತ್ ಸಂಪರ್ಕಕ್ಕೆ ಅನುದಾನ ಹೆಚ್ಚು ವೆಚ್ಚವಾಗುತ್ತಿರುವುದರಿಂದ ಕೊಳವೆ ಬಾವಿಗಳನ್ನು ನೀರಾವರಿ ಇಲಾಖೆಯಿಂದ ತೆಗೆದುಕೊಳ್ಳುವ ಅವಶ್ಯಕತೆ ಇಲ್ಲ.
2) ಮೀಸಲು ಕ್ಷೇತ್ರಗಳಲ್ಲಿನ ನದಿ ಮತ್ತು ಹಳ್ಳಗಳಿಗೆ ಚೆಕ್‌ಡ್ಯಾಂ/ಬ್ಯಾರೇಜ್‌ಗಳನ್ನು ನಿರ್ಮಿಸಿ ಅಂತರ್ಜಲ ಅಭಿವೃದ್ಧಿ ಪಡಿಸುವುದು.

2018-19 ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಣ್ಣ ನೀರಾವರಿ ಇಲಾಖೆ)**

**28. ವೈದ್ಯಕೀಯ ಶಿಕ್ಷಣ ಇಲಾಖೆ :-**

2018-19 ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ- ಎಸ್.ಸಿ.ಎಸ್.ಪಿ-ರೂ.45.50 ಕೋಟಿ, ಟಿ.ಎಸ್.ಪಿ- ರೂ.12.18 ಕೋಟಿ ಒಟ್ಟು ರೂ.57.62 ಕೋಟಿ.

ಈ ಕೆಳಕಂಡ ಕಾರ್ಯಕ್ರಮಗಳು ಮುಂದುವರೆದ ಕಾರ್ಯಕ್ರಮಗಳು

1) Multi Speciality ಆಸ್ಪತ್ರೆಗಳಲ್ಲಿ ಪ.ಜಾತಿ/ಪಂಗಡದ ರೋಗಿಗಳಿಗೆ ಉಚಿತ ವೈದ್ಯಕೀಯ ಚಿಕಿತ್ಸೆ ನೀಡುವುದು.
2) ಶುಲ್ಕ ಮರುಪಾವತಿ ಮಾಡುವುದು ಮತ್ತು ವಿದ್ಯಾರ್ಥಿಗಳಿಗೆ Aprons & BP Operators ನೀಡುವುದು.
3) ವೈದ್ಯಕೀಯ ಕಾಲೇಜುಗಳಲ್ಲಿ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ

ಮಾನ್ಯ ಲೋಕೋಪಯೋಗಿ ಸಚಿವರು, ಮೈಸೂರು ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿ ನಿಲಯದ ಕಟ್ಟಡ ಶಿಥಿಲಾವಸ್ಥೆಯಲ್ಲಿ ಇರುವುದನ್ನು ಗಮನಿಸಿ ಸೂಕ್ತ ಹೊಸ ಕಟ್ಟಡ ನಿರ್ಮಿಸಲು ಕ್ರಮ ವಹಿಸುವಂತೆ ತಿಳಿಸಿದರು.

ಮಾನ್ಯ ಅಧ್ಯಕ್ಷರು ಕೆಲವು ಹೆಣ್ಣು ಮಕ್ಕಳ ವಿದ್ಯಾರ್ಥಿ ನಿಲಯಗಳಲ್ಲಿ ಕಾರಿಡಾರ್‌ಗಳಲ್ಲಿ ಮಲಗುತ್ತಿದ್ದು ಅಗತ್ಯ ಕಟ್ಟಡ ನಿರ್ಮಿಸಲು ಸೂಚಿಸಿದರು.

ಈ ಯೋಜನೆಗಳಿಗೆ ಪ.ಜಾತಿ/ಪ.ಪಂಗಡ ಅಂಕಿ-ಅಂಶಗಳನ್ನು [illegible] ಸಮಾಜ ಕಲ್ಯಾಣ ಇಲಾಖೆಗೆ ಇದುವರೆಗೆ ಸಲ್ಲಿಸಿರುವುದಿಲ್ಲವೆಂದು ಸಭೆ ಗಮನಕ್ಕೆ ತರಲಾಯಿತು.

ಮಾನ್ಯ ಸಮಾಜ ಕಲ್ಯಾಣ ಸಚಿವರು ಮಾತನಾಡಿ ಪರಿಶಿಷ್ಟ ಜಾತಿ/ಪಂಗಡದ ಕಾಲೋನಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಕ್ರಮ ವಹಿಸಲು ತಿಳಿಸಿದರು. ಎಸ್.ಸಿ.ಎಸ್.ಪಿ/ಟಿಎಸ್.ಪಿ ಅನುದಾನದಲ್ಲಿ ಎಷ್ಟು ಪರಿಶಿಷ್ಟ ಜಾತಿ/ಪಂಗಡದ ರೈತರ ಕೃಷಿ ಪಂಪು ಸೆಟ್‌ಗಳಿಗೆ ಉಪಯೋಗಿಸಲಾಗುತ್ತಿರುವ ಬಗ್ಗೆ ಅಂಕೆ ಸಂಖ್ಯೆಗಳನ್ನು ನೀಡಲು ಸೂಚಿಸಿದರು.

ನಿರ್ದೇಶಕರು, ಪರಿಶಿಷ್ಟ ಪಂಗಡ ಕಲ್ಯಾಣ ಇವರು ಹೆಚ್.ಡಿ ಕೋಟೆ ಕ್ಷೇತ್ರ ವ್ಯಾಪ್ತಿಯಲ್ಲಿ ಪರಿಶಿಷ್ಟ ಪಂಗಡದ ಜನರ ಮನೆಗಳಲ್ಲಿ ವಿದ್ಯುತ್ ಬಿಲ್ ಬಾಕಿಯಿದ್ದು, ಅದನ್ನು ತುಂಬಲು ಮೈಸೂರು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿ, ಮೈಸೂರು ಇವರು ಒತ್ತಾಯಿಸಿದ್ದು, ಅಲ್ಲಿನ ಬಡ ಪರಿಶಿಷ್ಟ ಪಂಗಡದ ಜನರು ಬಿಲ್ ಮೊತ್ತ ಪಾವತಿಸುವ ಪರಿಸ್ಥಿತಿ ಇಲ್ಲದೇ ಇರುವುದರಿಂದ ಇಂಧನ ಇಲಾಖೆಯಿಂದ ಭರಿಸಲು ಕೋರಿದರು.

ಸಭೆಯಲ್ಲಿ ಹಾಜರಿದ್ದ ಇಂಧನ ಇಲಾಖೆಯ ಪ್ರತಿನಿಧಿ ಇವರು ಇಂಧನ ಇಲಾಖೆಯಿಂದ ಬಾಕಿ ಮೊತ್ತವನ್ನು ಮನ್ನಾ ಮಾಡಲು ಸಾಧ್ಯವಿಲ್ಲವೆಂದು ತಿಳಿಸಿರುವ ಹಿನ್ನೆಲೆಯಲ್ಲಿ ಸದರಿ ಬಾಕಿ ಮೊತ್ತವನ್ನು ಸಮಾಜ ಕಲ್ಯಾಣ ಇಲಾಖೆಯಿಂದಲೇ ಭರಿಸಲಾಗುವುದೆಂದು ಮಾನ್ಯ ಸಮಾಜ ಕಲ್ಯಾಣ ಸಚಿವರು ತಿಳಿಸಿದರು.

**ಪರಿಷತ್ತಿನ ನಿರ್ಧಾರ:-**

1) 2018-19ನೇ ಸಾಲಿನಲ್ಲಿ ಪ್ರಗತಿ ಕಾಲೋನಿ ಯೋಜನೆಯಡಿ ಗುರುತಿಸಲಾದ ಕಾಲೋನಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವುದು.

2018-19 ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ: ಸರ್ಕಾರದ ಕಾರ್ಯದರ್ಶಿ, ಇಂಧನ ಇಲಾಖೆ)**

**೩೩. ಕನ್ನಡ ಮತ್ತು ಸಂಸ್ಕೃತಿ ಇಲಾಖೆ :-**

2018-19 ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ- ಎಸ್.ಸಿ.ಎಸ್.ಪಿ-ರೂ.30.75 ಕೋಟಿ, ಟಿ.ಎಸ್.ಪಿ- ರೂ.13.64 ಕೋಟಿ ಒಟ್ಟು ರೂ.44.39 ಕೋಟಿ.

ಈ ಕೆಳಕಂಡ ಕಾರ್ಯಕ್ರಮಗಳು ಮುಂದುವರೆದ ಕಾರ್ಯಕ್ರಮಗಳು

1) ಪ.ಜಾತಿ/ಪಂಗಡದ ಕಲಾವಿದರಿಗೆ ಪ್ರೋತ್ಸಾಹಧನ/ಪಿಂಚಣಿ ನೀಡುವುದು.

[illegible]
ಆರೋಗ್ಯ ತಪಾಸಣೆ ಮತ್ತು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

7) ಮೀಸಲು ಕ್ಷೇತ್ರಗಳಲ್ಲಿ ಆಸ್ಪತ್ರೆಗಳ ದುರಸ್ಥಿ ಮತ್ತು ಸಲಕರಣೆಗಳ ಸರಬರಾಜು.

ಮಾನ್ಯ ಸದಸ್ಯರಾದ ಡಾ: ಉಮೇಶ್ ಜಾದವ್ ರವರು ಮಾತನಾಡಿ ಮೊಬೈಲ್ ಮೆಡಿಕಲ್ ಯುನಿಟ್‌ಗಳನ್ನು ಸ್ಥಗಿತಗೊಳಿಸದೇ ಮುಂದುವರಿಸಬೇಕೆಂದು ಒತ್ತಾಯಿಸಿದರು. ಈ ಇಲಾಖೆಯ ಕರಡು ಕ್ರಿಯಾ ಯೋಜನೆಯಲ್ಲಿ ಆಶಾ ಕಾರ್ಯಕರ್ತರಿಗೆ ಗೌರವಧನಕ್ಕಾಗಿ ನಿಗದಿಪಡಿಸಿದ ಮೊತ್ತವನ್ನು ಮತ್ತು ಆಸ್ಪತ್ರೆ ಕಟ್ಟಡಗಳ ನಿರ್ವಹಣೆ/ಹೊಸ ನಿರ್ಮಾಣ ಇವುಗಳ ಬಗ್ಗೆ ಮರು ಪರಿಶೀಲಿಸಲು ಮತ್ತು ಈ ಅನುದಾನವನ್ನು ಬೇರೆ ಕಾರ್ಯಕ್ರಮಗಳಿಗೆ ಉಪಯೋಗಿಸಲು ಪರಿಷ್ಕೃತ ಕ್ರಿಯಾ ಯೋಜನೆಯನ್ನು ಸಲ್ಲಿಸಲು ಮಾನ್ಯ ಸಮಾಜ ಕಲ್ಯಾಣ ಸಚಿವರು ತಿಳಿಸಿದರು.

(36)

2) ಪ.ಜಾತಿ/ಪಂಗಡದ ಕಲಾವಿದರಿಗೆ ವಾದ್ಯ ಪರಿಕರ. ವೇಷ ಭೂಷಣ ಖರೀದಿಗೆ ಸಹಾಯ.
3) ಸಾಂಸ್ಕೃತಿಕ ಸಂಘ ಸಂಸ್ಥೆಗಳಿಗೆ ಸಹಾಯಧನ.
4) ಸಂವಿಧಾನದ ಡಿಬೇಟ್‌ಗಳನ್ನು ಕನ್ನಡಕ್ಕೆ ತರ್ಜುಮೆ ಮಾಡುವುದು
5) ಡಾ॥ ಬಿ.ಆರ್. ಅಂಬೇಡ್ಕರ್ ಸಂಪುಟಗಳ ಮುದ್ರಣ.
6) ಪತ್ರಾಗಾರ ಇಲಾಖೆಯಿಂದ ಪ.ಜಾತಿ/ಪಂಗಡಕ್ಕೆ ಸೇರಿದ ಐತಿಹಾಸಿಕ/ಸಾಮಾಜಿಕ/ಧಾರ್ಮಿಕ /ವಿಶೇಷ ವ್ಯಕ್ತಿಗಳ/ಸ್ಥಳಗಳ ಬಗ್ಗೆ ದಾಖಲೀಕರಣ ಮಾಡುವುದು.

ಮಾನ್ಯ ಸದಸ್ಯರಾದ ಶ್ರೀ. ಆರ್ ಧ್ರುವನಾರಾಯಣ, ಡಾ: ಕೆ. ಅನ್ನದಾನಿ ಇವರು ಪರಿಶಿಷ್ಟ ಜಾತಿ/ಪಂಗಡದ ಜನರಲ್ಲಿ ಬಹಳಷ್ಟು ಕಲಾವಿದರು ಇರುವುದರಿಂದ ಈ ಇಲಾಖೆಗೆ ಹೆಚ್ಚಿನ ಅನುದಾನ ಒದಗಿಸುವಂತೆ ಕೋರಿದರು. ಶ್ರೀ. ಧರ್ಮಸೇನ. ಆರ್ ಇವರು ಕೂಡ ಈ ವಿಷಯದ ಬಗ್ಗೆ ಪ್ರಸ್ತಾಪಿಸಿದರು.

ಮಾನ್ಯ ಸಮಾಜ ಕಲ್ಯಾಣ ಸಚಿವರು ಇವರು ಭಾರತ ಸಂವಿಧಾನದ ರಚನಾ ಸಭೆಯಲ್ಲಿ ನಡೆದ ಚರ್ಚಾವಳಿಗಳನ್ನು ಕನ್ನಡಕ್ಕೆ ಭಾಷಾಂತರ ಮಾಡಿ ಮುದ್ರಿಸುವ ಕಾರ್ಯಕ್ರಮ ಪ್ರಗತಿಯಲ್ಲಿದ್ದು, ಸಂವಿಧಾನ ದಿನವಾದ ನವೆಂಬರ್ 26 ರಂದು ಲೋಕಾರ್ಪಣೆ ಮಾಡಲು ಕ್ರಮವಹಿಸಲು ಸದರಿ ಇಲಾಖೆಗೆ ತಿಳಿಸಿದರು.

2018-19 ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ: ಸರ್ಕಾರದ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ)**

**34. ಯೋಜನಾ ಇಲಾಖೆ :-**

2018-19 ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ- ಎಸ್.ಸಿ.ಎಸ್.ಪಿ-ರೂ.370.67 ಕೋಟಿ, ಟಿ.ಎಸ್.ಪಿ- ರೂ.150.71 ಕೋಟಿ ಒಟ್ಟು ರೂ.521.38 ಕೋಟಿ.

ಈ ಕೆಳಕಂಡ ಕಾರ್ಯಕ್ರಮಗಳು ಮುಂದುವರೆದ ಕಾರ್ಯಕ್ರಮಗಳು

1) ಹೈದ್ರಾಬಾದ್/ ಬಯಲು ಸೀಮೆ/ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಮತ್ತು ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿಯಿಂದ ಪ.ಜಾತಿ/ಪಂಗಡದ ಕಾಲೋನಿಗಳಿಗೆ ಸಂಪರ್ಕ ರಸ್ತೆ, ಚರಂಡಿ, ಶುದ್ಧ ಕುಡಿಯುವ ನೀರಿನ ಘಟಕ ಮತ್ತು ವಿದ್ಯಾರ್ಥಿನಿಲಯಗಳ/ಅಂಗನವಾಡಿ, ಆರೋಗ್ಯ ಕೇಂದ್ರ ಕಟ್ಟಡಗಳ ದುರಸ್ಥಿ ಮತ್ತು ಉನ್ನತೀಕರಣ.

ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಕಾರ್ಯದರ್ಶಿಯವರು ಕಾಮಗಾರಿಗಳನ್ನು ಕೈಗೆತ್ತಿಗೊಂಡು ಕಾಮಗಾರಿಗಳು ಮುಕ್ತಾಯಗೊಂಡಿದ್ದು ಅನುದಾನ ಬಿಡುಗಡೆಯಾಗದಿರುವ ಕಾರಣ ಬಿಲ್ಲಿನ ಮೊತ್ತ ಪಾವತಿಸಲು ಬಾಕಿಯಿರುತ್ತದೆ. ಆದ್ದರಿಂದ ಕೂಡಲೇ ಅನುದಾನ ಬಿಡುಗಡೆ ಮಾಡುವಂತೆ ಕೋರಿದರು. ಕ್ರಿಯಾ ಯೋಜನೆ ಅನುಮೋದನೆಯಾದ ನಂತರ ಅನುದಾನವನ್ನು ಬಿಡುಗಡೆ ಮಾಡಲಾಗುವುದೆಂದು ಅಪರ ಮುಖ್ಯ ಕಾರ್ಯದರ್ಶಿ ಅರ್ಥಿಕ ಇಲಾಖೆ ಇವರು ತಿಳಿಸಿದರು.

2018-19 ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ: ಸರ್ಕಾರದ ಕಾರ್ಯದರ್ಶಿ, ಯೋಜನಾ ಇಲಾಖೆ)**

**೩೫. ಕಾನೂನು ಇಲಾಖೆ :-**

2018-19 ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ- ಎಸ್.ಸಿ.ಎಸ್.ಪಿ-ರೂ.1.14 ಕೋಟಿ, ಟಿ.ಎಸ್.ಪಿ- ರೂ.0.52 ಕೋಟಿ ಒಟ್ಟು ರೂ.1.66 ಕೋಟಿ.

ಈ ಕೆಳಕಂಡ ಕಾರ್ಯಕ್ರಮಗಳು ಮುಂದುವರೆದ ಕಾರ್ಯಕ್ರಮಗಳು

1) ಸರ್ಕಾರಿ ಮತ್ತು ಖಾಸಗಿ ಕಾನೂನು ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ಪ.ಜಾತಿ / ಪ.ಪಂಗಡದ ವಿದ್ಯಾರ್ಥಿಗಳಿಗೆ ಮತ್ತು ಸಮಾಜ ಕಲ್ಯಾಣ ಇಲಾಖೆಯಿಂದ ತರಬೇತಿ ನೀಡಲಾಗುತ್ತಿರುವ ವಕೀಲರಿಗೆ ಲ್ಯಾಪ್‌ಟಾಪ್ ವಿತರಿಸುವುದು. (ಕುಟುಂಬದ ವಾರ್ಷಿಕ ಆದಾಯ ರೂ.5.00 ಲಕ್ಷದೊಳಗಿರತಕ್ಕದ್ದು).

ಮಾನ್ಯ ಸಮಾಜ ಕಲ್ಯಾಣ ಸಚಿವರು ಕಾನೂನು ಪದವೀಧರರಿಗೆ ಮಾಸಿಕ ಶಿಷ್ಯ ವೇತನವನ್ನು ಹೆಚ್ಚಿಸಲು ಮತ್ತು ತಮ್ಮ ಕಛೇರಿಗಳನ್ನು ಸ್ಥಾಪಿಸಲು ಆರ್ಥಿಕ ಸಹಾಯ ನೀಡುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗುವುದೆಂದು ತಿಳಿಸಿದರು.

2018-19 ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ: ಸರ್ಕಾರದ ಕಾರ್ಯದರ್ಶಿ, ಕಾನೂನು ಇಲಾಖೆ)**

**36. ಆರ್ಥಿಕ ಇಲಾಖೆ :-**

2018-19 ನೇ ಸಾಲಿನಲ್ಲಿ ಸಾಲ ಮನ್ನಾ ಯೋಜನೆಗೆ ಹಂಚಿಕೆಯಾದ ಅನುದಾನ- ಎಸ್.ಸಿ.ಎಸ್.ಪಿ-ರೂ.700.00 ಕೋಟಿ, ಟಿ.ಎಸ್.ಪಿ- ರೂ.300.00 ಕೋಟಿ ಒಟ್ಟು ರೂ.1000.00 ಕೋಟಿ.

ಮಾನ್ಯ ಸಮಾಜ ಕಲ್ಯಾಣ ಸಚಿವರು ಮಾತನಾಡಿ ಸಾಲ ಪಡೆದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ರೈತರ ಅಂಕಿ-ಅಂಶಕ್ಕೆ ಅನುಗುಣವಾಗಿ ಮಾತ್ರ ಈ ಅನುದಾನವನ್ನು ಉಪಯೋಗಿಸಲು ಸೂಚಿಸಿದರು. ಈ ಬಗ್ಗೆ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ ಇವರು ಈ ಅನುದಾನವನ್ನು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ರೈತರ ಅಂಕಿ ಸಂಖ್ಯೆ ಅನುಗುಣವಾಗಿಯೇ ಉಪಯೋಗಿಸಲಾಗುವುದೆಂದು ಮತ್ತು ಉಳಿಕೆಯಾಗಿದ್ದಲ್ಲಿ ಅದನ್ನು ಸಮಾಜ ಕಲ್ಯಾಣ ಇಲಾಖೆಗೆ ನೀಡಲಾಗುವುದೆಂದು ತಿಳಿಸಿದರು.

2018-19 ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ: ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ)**

**37. ಗಣಿ ಮತ್ತು ಭೂ ವಿಜ್ಞಾನ ಇಲಾಖೆ :-**

2018-19 ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ- ಎಸ್.ಸಿ.ಎಸ್.ಪಿ-ರೂ. 1.00 ಕೋಟಿ, ಟಿ.ಎಸ್.ಪಿ- ರೂ. 1.00 ಕೋಟಿ ಒಟ್ಟು ರೂ. 2.00 ಕೋಟಿ.

ಈ ಅನುದಾನವನ್ನು ವೇ ಬ್ರಿಡ್ಜ್ ಅಳವಡಿಸಲು ಪ್ರತಿ ಘಟಕಕ್ಕೆ ರೂ. 50,000/- ಸಹಾಯಧನ, ಎಂ ಸ್ಯಾಂಡ್ ತಯಾರಿಸುವ ಯಂತ್ರೋಪಕರಣಗಳ ಅಳವಡಿಕೆಗೆ ಪ್ರತಿ ಘಟಕಕ್ಕೆ ರೂ.

(34)

10.00 ಲಕ್ಷಗಳ ಸಹಾಯಧನ ಮತ್ತು ಸಾಂಪ್ರದಾಯಿಕವಾಗಿ ಕಟ್ಟಡಕಲ್ಲು ತೆಗೆಯುವ ವ್ಯಕ್ತಿ/ಸಂಘಗಳಿಗೆ ಪ್ರತಿ ಎಕರೆಗೆ ಇ.ಪಿ.ಎಫ್ ಶುಲ್ಕ ರೂ. 34000/-ಗಳ ಸಹಾಯಧನ ನೀಡಲು ಇಲಾಖೆಯು ಪ್ರಸ್ತಾಪಿಸಿದೆ.

ಈ ಬಗ್ಗೆ ಮತ್ತೊಮ್ಮೆ ಇಲಾಖೆಯೊಂದಿಗೆ ಚರ್ಚಿಸಿ ತೀರ್ಮಾನಿಸಲಾಗುವುದೆಂದು ಮಾನ್ಯ ಸಮಾಜ ಕಲ್ಯಾಣ ಸಚಿವರು ತಿಳಿಸಿದರು.

2018-19 ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ: ಸರ್ಕಾರದ ಕಾರ್ಯದರ್ಶಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ)**

**38. ಸಮಾಜ ಕಲ್ಯಾಣ ಇಲಾಖೆ :-**

2018-19 ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ- ಎಸ್.ಸಿ.ಎಸ್.ಪಿ-ರೂ.4875.56 ಕೋಟಿ, ಟಿ.ಎಸ್.ಪಿ- ರೂ.1460.34 ಕೋಟಿ ಒಟ್ಟು ರೂ.6335.90 ಕೋಟಿ.

ಇಲಾಖೆಯ ಎಲ್ಲಾ ಕಾರ್ಯಕ್ರಮಗಳಿಗೆ ತಗಲುವ ವೆಚ್ಚವನ್ನು ಎಸ್.ಸಿ.ಎಸ್.ಪಿ/ ಟಿ.ಎಸ್.ಪಿಯಡಿಯಲ್ಲಿಯೇ ಭರಿಸಲಾಗುತ್ತದೆ ಎಂದು ತಿಳಿಸುತ್ತಾ ಸಮಾಜ ಕಲ್ಯಾಣ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆಯ ವಿವಿಧ ಯೋಜನೆಗಳ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಿ ವಿವರಗಳನ್ನು ಕ್ರಿಯಾ ಯೋಜನೆಯಲ್ಲಿ ನೀಡಲಾಗಿದೆ ಎಂದು ತಿಳಿಸಿದರು. ವಿವರಗಳನ್ನು ಲಗತ್ತಿಸಿದೆ.

ಮಾನ್ಯ ಸದಸ್ಯರಾದ ಶ್ರೀ. ಆರ್. ಧ್ರುವನಾರಾಯಣ ಇವರು ಮಾತನಾಡಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಪದವಿ ಪೂರ್ವ ತರಗತಿಗಳನ್ನು ತಾಲ್ಲೂಕಿಗೆ ಒಂದರಂತೆ ಎಲ್ಲಾ ತಾಲ್ಲೂಕುಗಳಲ್ಲಿ ಪ್ರಾರಂಭಿಸಬೇಕೆಂದು ಒತ್ತಾಯಿಸಿದರು.

ಮಾನ್ಯ ಸದಸ್ಯರಾದ ಡಾ: ಕೆ.ಅನ್ನದಾನಿ ಇವರು ಮಾತನಾಡಿ ವಸತಿ ಮತ್ತು ಆಶ್ರಮ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಮತ್ತು ಬೋಧಕರ ಕೊರತೆಯನ್ನು ನಿವಾರಿಸಲು ಅಗತ್ಯ ಕ್ರಮ ವಹಿಸುವಂತೆ ತಿಳಿಸಿದರು.

ಮಾನ್ಯ ಸಮಾಜ ಕಲ್ಯಾಣ ಸಚಿವರು, ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಕಟ್ಟಡಗಳ ನಿರ್ಮಾಣಕ್ಕೆ ಬೇಕಾಗುವ ಅನುದಾನದ ಬಗ್ಗೆ ಸಭೆಗೆ ತಿಳಿಸಲು ಅಪರ ಮುಖ್ಯ ಕಾರ್ಯದರ್ಶಿಗಳಿಗೆ ಸೂಚಿಸಿದರು.

ರಾಜ್ಯದಲ್ಲಿ ಒಟ್ಟು 653 ವಸತಿ ಶಾಲೆಗಳನ್ನು ಪರಿಶಿಷ್ಟ ಜಾತಿ/ಪಂಗಡದವರಿಗೆ ಪ್ರಾರಂಭಿಸಲಾಗಿದ್ದು, ಅದರಲ್ಲಿ 225 ವಸತಿ ಶಾಲೆಗಳಿಗೆ ಸ್ವಂತ ಕಟ್ಟಡಗಳು ಇಲ್ಲದ ಕಾರಣ ಬಾಡಿಗೆ ಕಟ್ಟಡದಲ್ಲಿ ನಡೆಸಲಾಗುತ್ತಿದೆ. ಆ ಶಾಲೆಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಸಾಧ್ಯವಾಗುತ್ತಿಲ್ಲ. ಈಗಾಗಲೇ 68 ವಸತಿ ಶಾಲೆಗಳಿಗೆ ನಿವೇಶನಗಳು ಲಭ್ಯವಿದ್ದು, ಅವುಗಳ ಕಟ್ಟಡಕ್ಕೆ ರೂ. 1053.00 ಕೋಟಿಗಳ ಅನುದಾನ ಅವಶ್ಯಕತೆಯಿರುತ್ತದೆ ಎಂದು ಮತ್ತು ಒಟ್ಟು 225 ಶಾಲೆಗಳ ಕಟ್ಟಡ ನಿರ್ಮಿಸಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸುಮಾರು ರೂ. 4500.00 ಕೋಟಿಗಳ ಬೇಕಾಗಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು. ಅಲ್ಲದೇ ಪ್ರಸ್ತುತ ವರ್ಷದಲ್ಲಿ ಪ್ರಗತಿಯಲ್ಲಿರುವ ಕಟ್ಟಡ ನಿರ್ಮಾಣಕ್ಕೆ ಸುಮಾರು ರೂ.450.00 ಕೋಟಿ ಅನುದಾನದ ಕೊರತೆಯಿದೆ ಎಂದು ತಿಳಿಸಿದರು.

ಮಾನ್ಯ ಲೋಕೋಪಯೋಗಿ ಸಚಿವರು ಮಾತನಾಡಿ ಈ ವರ್ಷ ಭಾರೀ ನೀರಾವರಿ ಇಲಾಖೆಯಿಂದ ರೂ.500.00 ಕೋಟಿಗಳನ್ನು ವಸತಿ ಶಾಲೆ ಕಟ್ಟಡ ನಿರ್ಮಾಣಕ್ಕೆ ನೀಡಲು ಮತ್ತು ಮುಂದಿನ 3 ವರ್ಷಗಳಲ್ಲಿ ಬೇಕಾಗುವ ಒಟ್ಟು ಅನುದಾನವನ್ನು ಒದಗಿಸಲು ಸೂಕ್ತ ಕ್ರಮವಹಿಸಲು ತಿಳಿಸಿದರು.

ಸನ್ಮಾನ್ಯ ಮುಖ್ಯ ಮಂತ್ರಿಗಳು ಈ ಕುರಿತು ಮಾತನಾಡಿ ವಿವರಗಳೊಂದಿಗೆ ಕಟ್ಟಡ ಕಾಮಗಾರಿಗಳ ಬಗ್ಗೆ ಪ್ರಸ್ತಾವನೆಯನ್ನು ಸಚಿವ ಸಂಪುಟಕ್ಕೆ ಸಲ್ಲಿಸಲು ಸೂಚಿಸಿದರು.

ಈ ಬಗ್ಗೆ ಆರ್ಥಿಕ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಮತ್ತು ಭಾರೀ ನೀರಾವರಿ ಇಲಾಖೆ ಹಾಗೂ ಅನುದಾನ ಹೆಚ್ಚಿಗೆ ಒದಗಿಸಿದ ಇತರ ಇಲಾಖೆಗಳು ಸೇರಿ ಮತ್ತೊಮ್ಮೆ ಪರಿಶೀಲಿಸಿ ಅನುದಾನ ಮರು ಹಂಚಿಕೆ ಕುರಿತು ಕ್ರಮ ವಹಿಸಲು ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಸಹ ಸೂಚಿಸಿದರು.

**ಪರಿಷತ್ತಿನ ನಿರ್ಧಾರ:-**

1) ಭಾರೀ ನೀರಾವರಿ ಇಲಾಖೆಯಿಂದ ರೂ.500.00 ಕೋಟಿಗಳನ್ನು ಮರು ಹಂಚಿಕೆ ಮಾಡಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗೆ ನೀಡುವುದು.
2) ಮುಂದಿನ 3 ವರ್ಷಗಳಲ್ಲಿ ಪ್ರತಿ ವರ್ಷ ಸುಮಾರು ರೂ.1500.00 ಕೋಟಿ ಅನುದಾನ ನೀಡಿ ಒಟ್ಟು ವಸತಿ ಶಾಲೆಗಳಿಗೆ ಸ್ವಂತ ಕಟ್ಟಡ ನಿರ್ಮಿಸಲು ಕ್ರಮ ಕೈಗೊಳ್ಳುವುದು.

2018-19 ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಮಾಜ ಕಲ್ಯಾಣ/ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ)**

**ಇತರೆ ವಿಷಯಗಳು**

1) ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಹಕಾರ ಇಲಾಖೆ, ಆರ್.ಡಿ.ಪಿ.ಆರ್ ಇಲಾಖೆಗಳಲ್ಲಿ ಉಳಿಯುವ ಅನುದಾನದ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲು ನೋಡಲ್ ಏಜೆನ್ಸಿ ಅಧ್ಯಕ್ಷರಾದ ಮಾನ್ಯ ಸಮಾಜ ಕಲ್ಯಾಣ ಇಲಾಖೆ ಸಚಿವರ ಸಮ್ಮುಖದಲ್ಲಿ ಚರ್ಚಿಸಿ ಸೂಕ್ತ ಕ್ರಮ ತೆಗದುಕೊಳ್ಳಲು ತೀರ್ಮಾನಿಸಲಾಗಿದೆ.

**(ಕ್ರಮ:- ಸಮಾಜ ಕಲ್ಯಾಣ ಇಲಾಖೆ, ಆರ್ಥಿಕ ಇಲಾಖೆ ಮತ್ತು ಸಂಬಂಧ ಪಟ್ಟ ಇಲಾಖೆಗಳು)**

2) ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅಡಿಯಲ್ಲಿ ಕರ್ನಾಟಕ ಅನುಸೂಚಿತ ಜಾತಿ ಉಪ ಹಂಚಿಕೆ ಮತ್ತು ಬುಡಕಟ್ಟು ಉಪ ಹಂಚಿಕೆ ನಿಯಮಗಳಂತೆ (ನಿಯಮ 9(3)) ಆಯ್ಕೆ ಸಮಿತಿಗಳು ಪಾರದರ್ಶಕವಾಗಿ ವೈಯಕ್ತಿಕ ಫಲಾನುಭವಿಗಳನ್ನು ಆಯ್ಕೆ ಮಾಡುವುದು.

**(ಕ್ರಮ:- ಎಲ್ಲಾ ಇಲಾಖೆಗಳು)**

3) ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅಡಿಯಲ್ಲಿ ಇಲಾಖೆಗಳಲ್ಲಿ ಒಂದು ಯೋಜನೆಯಿಂದ ಇನ್ನೊಂದು ಯೋಜನೆಗೆ ಅನುದಾನವನ್ನು ಮರು ಹಂಚಿಕೆ ಮಾಡಲು ಮತ್ತು ಒಂದು ಇಲಾಖೆಯಿಂದ ಇನ್ನೊಂದು ಇಲಾಖೆಗೆ ಮರು ಹಂಚಿಕೆ ಮಾಡಲು ಆರ್ಥಿಕ ಅಧಿಕಾರವನ್ನು ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿಗಳಿಗೆ ಪ್ರದತ್ತ ಮಾಡಲು ಪ್ರಸ್ತಾಪಿಸಲಾಗಿದ್ದು ಸದರಿ ವಿಷಯವನ್ನು ಪ್ರತ್ಯೇಕವಾಗಿ ಕಡತದಲ್ಲಿ ಆರ್ಥಿಕ ಇಲಾಖೆಗೆ ಸಲ್ಲಿಸಲು ತೀರ್ಮಾನಿಸಲಾಯಿತು.

**(ಕ್ರಮ:- ಸಮಾಜ ಕಲ್ಯಾಣ ಇಲಾಖೆ)**

1) ರಾಜ್ಯ ಪರಿಷತ್ತಿನ ತೀರ್ಮಾನಗಳಂತೆ ಅವಶ್ಯಕತೆ ಇದ್ದಲ್ಲಿ ಸಂಬಂಧ ಪಟ್ಟ ಇಲಾಖೆಗಳು ತಕ್ಷಣ ಸರ್ಕಾರಿ ಆದೇಶಗಳನ್ನು ಹೊರಡಿಸುವುದು.

**(ಕ್ರಮ:- ಸಂಬಂಧ ಪಟ್ಟ ಎಲ್ಲಾ ಇಲಾಖೆಗಳು)**

ಎಲ್ಲಾ ವಿಷಯಗಳ ಬಗ್ಗೆ ಚರ್ಚೆಯಾದ ನಂತರ ಸನ್ಮಾನ್ಯ ಮುಖ್ಯಮಂತ್ರಿಗಳು ಸಭೆಯನ್ನು ಉದ್ದೇಶಿಸಿ ಮಾತನಾಡಿ ಎಸ್.ಸಿ.ಎಸ್.ಪಿ/ಟಿಎಸ್.ಪಿ ಕಾಯ್ದೆಯಲ್ಲಿ ನಿಗದಿತ ಅನುದಾನ ಬಳಕೆ ಮಾಡುವಲ್ಲಿ ನಿರ್ಲಕ್ಷ್ಯ ತೋರುವ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಜರುಗಿಸುವುದು ಅನಿವಾರ್ಯ. ಆದ್ದರಿಂದ ಎಲ್ಲಾ ಅಧಿಕಾರಿಗಳು ಅನುದಾನವನ್ನು ಸಮರ್ಪಕವಾಗಿ ಬಳಕೆ ಮಾಡತಕ್ಕದ್ದೆಂದು ಸ್ಪಷ್ಟ ಸೂಚನೆ ನೀಡಿರುತ್ತಾರೆ. ಕಳೆದ ವರ್ಷ ಎಸ್.ಸಿ.ಎಸ್.ಪಿ/ಟಿಎಸ್.ಪಿ ಯೋಜನೆಯಡಿ ಸುಮಾರು ರೂ. 27800.00 ಕೋಟಿ ನೀಡಿದ್ದು ಈ ವರ್ಷ ರೂ.29209.00 ಕೋಟಿಗಳನ್ನು ಒದಗಿಸಲಾಗಿದ್ದು, ಶೇ 100 ರಷ್ಟು ವೆಚ್ಚವಾಗಲೇಬೇಕೆಂದು ಮತ್ತು ಕ್ರಿಯಾ ಯೋಜನೆಗಳಂತೆ ಎಲ್ಲಾ ಕಾರ್ಯಕ್ರಮಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಸಬೇಕೆಂದು ಎಲ್ಲಾ ಅಧಿಕಾರಿಗಳು ಮುಂಜಾಗ್ರತೆ ವಹಿಸಲು ಸೂಚಿಸಿದರು.

ಅನುದಾನವನ್ನು ಖಜಾನೆಯಿಂದ ಸೆಳೆದು ಠೇವಣಿಯಾಗಿ ಇರಿಸಿಕೊಳ್ಳಬಾರದು ಮತ್ತು ಅದನ್ನು ಅದೇ ವರ್ಷದಲ್ಲಿ ಅನುಮೋದಿತ ಕಾರ್ಯಕ್ರಮಗಳಿಗೆ ವೆಚ್ಚ ಮಾಡಬೇಕೆಂದು ಸಹ ಎಚ್ಚರಿಕೆ ನೀಡಿದರು.

ಸಭೆಯಲ್ಲಿ ಹಾಜರಿದ್ದ ಸನ್ಮಾನ್ಯ ಮುಖ್ಯ ಮಂತ್ರಿಗಳಿಗೂ, ಮಾನ್ಯ ಉಪ ಮುಖ್ಯ ಮಂತ್ರಿಗಳಿಗೂ, ಮಾನ್ಯ ಸಚಿವರಿಗೂ ಹಾಗೂ ಸಮಿತಿ ಸದಸ್ಯರುಗಳಿಗೂ ಮತ್ತು ಅಧಿಕಾರಿಗಳಿಗೂ ವಂದನೆಗಳನ್ನು ಅರ್ಪಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯ ಮಂತ್ರಿಗಳು ಹಾಗೂ ಅಧ್ಯಕ್ಷರು,
ರಾಜ್ಯ ಅನುಸೂಚಿತ ಜಾತಿಗಳು/ಅನುಸೂಚಿತ
ಪಂಗಡಗಳ ಅಭಿವೃದ್ಧಿ ಪರಿಷತ್ತು.